ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಅಳವಂಡಿ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಡಾ. ಪ್ರಕಾಶ ಬಳ್ಳಾರಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**ALAVANDI:** An Introducing Book on the Places in Karnataka that Played a Major Role in the Freedom struggle, Written by Dr. Prakash Ballary, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002.

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಪ್ರಕಾಶ ಬಳ್ಳಾರಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೪೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಒಂದು ನೆಲದ ಹೋರಾಟದ ದಾಖಲೀಕರಣವು ಮುಂದಿನ ಪೀಳಿಗೆಗೆ ಬಹುಪಯುಕ್ತವಾದುದು. ಈ ದಿಸೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ದ ಅಂಗವಾಗಿ ಕರ್ನಾಟಕದ 75 ಸ್ವಾತಂತ್ರ್ಯ ಹೋರಾಟಗಳ ಸ್ಥಳಗಳ 75 ಕಿರುಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಅಭಿನಂದನಾರ್ಹ.

ಕೊಪ್ಪಳವು ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ ಭಾಗ. ಮಹಾಕೊಪಣ ನಗರವೆಂದು ಹೆಸರಾದದ್ದು. ಸಾಧುಗಳ, ಸೂಫಿಗಳ, ಶರಣರ, ಜೈನರ, ಬೌದ್ಧರ ಭಾವೈಕ್ಯದ ನಾಡು. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಎದೆತಟ್ಟಿ ಹೋರಾಡಿದ ಮಹಾನುಭಾವರ ಬೀಡು.

ಈ ದಿಸೆಯಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1819 ರ ಮೊದಲ ಸಶಸ್ತ್ರ ಬಂಡಾಯದಿಂದಿಡಿದು, ಹೈದರಾಬಾದ್ ವಿಮೋಚನಾ ಹೋರಾಟದವರೆಗೆ ಕೊಪ್ಪಳ ಸಮೀಪದ 'ಅಳವಂಡಿ' ಗ್ರಾಮದ ಕೊಡುಗೆ ಅನನ್ಯವಾದುದು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರೋಚಕ ನಿದರ್ಶನಗಳಿಗೆ ಸಾಕ್ಷಿಯಾಗಿ 'ಅಳವಂಡಿ' ನಿಲ್ಲುತ್ತದೆ. ಇಲ್ಲಿನ ಹೋರಾಟಗಳು, ಮುನ್ನೆಲೆಯ ಹೋರಾಟಗಾರರು, ದೇಶಭಕ್ತ ಜನತೆಯ ತ್ಯಾಗಕ್ಕೆ ಎಂದಿಗೂ ಬೆಲೆ ಕಟ್ಟಲಾಗುವುದಿಲ್ಲ.

ಶಿವಮೂರ್ತಿ ಸ್ವಾಮಿ ಅಳವಂಡಿಯಂತಹ ಮುಖ್ಯ ನೇತಾರರಾದಿಯಾಗಿ, ಅಳವಂಡಿ ಮತ್ತು ಸುತ್ತಮುತ್ತಲ ಗ್ರಾಮಗಳ ಸ್ವಾತಂತ್ರ್ಯ ಹೋರಾಟಗಾರರಿಗೆ ಅದೆಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯೇ. ತಾಯ್ನಾಡಿಗಾಗಿ ಹೋರಾಡಿ ಮಡಿದ ಆ ಎಲ್ಲ ಚೇತನಗಳನ್ನು ನೆನಪಿಸಿಕೊಂಡು, 'ಅಳವಂಡಿ' ಭಾಗದ ಸ್ವಾಂತಂತ್ರ್ಯ ಹೋರಾಟದ ಕಿರು ಪುಸ್ತಕ ರಚನೆಗೆ ಅವಕಾಶ ಮಾಡಿಕೊಟ್ಟ

ಕರ್ನಾಟಕ ಸಾಹಿತ್ಯ ಅಕಾಡೆಮಿಗೂ, ಸಂಪಾದಕರಾದ ಡಾ. ಮೃತ್ಯುಂಜಯ ರುಮಾಲೆ ಅವರಿಗೂ ಮತ್ತು ಈ ಕೃತಿ ರಚನೆಗೆ ಸಹಕಾರಿಯಾದ ಆಕರ ಗ್ರಂಥಗಳ ಲೇಖಕರು, ಸಂಪಾದಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಡಾ. ಪ್ರಕಾಶ ಬಳ್ಳಾರಿ**

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಸ್ವಾತಂತ್ರ್ಯ ಹೋರಾಟದಲ್ಲಿ 'ಅಳವಂಡಿ' ಗ್ರಾಮದ ಪಾತ್ರ ೧೭
ಭೌಗೋಳಿಕ ಪರಿಸರ ೧೭
ಮುಂಬೈ ಹಾಗೂ ಹೈದ್ರಾಬಾದ ಪ್ರಾಂತ್ಯಗಳ ಗಡಿ ವಿಚಾರ ೧೮
ಬರಗಾಲದ ಬರೆಯ ವಿಚಾರ ೧೮
ಶಿಕ್ಷಣದ ಸ್ಥಿತಿಗತಿ ೧೯
ಹೋರಾಟದ ಹಿನ್ನೆಲೆ ೧೯
ಜಮೀನುದಾರ ವೀರಪ್ಪ ದೇಸಾಯಿಯವರ ಸಶಸ್ತ್ರ ಬಂಡಾಯದಲ್ಲಿ ಅಳವಂಡಿಯ ಪಾತ್ರ – ೧೮೧೯ ೨೦
ಮುಂಡರಗಿ ಭೀಮರಾಯರ ಹೋರಾಟದಲ್ಲಿ ಅಳವಂಡಿ ೨೨
ನಿಜಾಮನ ಜಾತಿ ಪ್ರೇಮದ ವಿರುದ್ಧ ಆರ್ಯ ಸಮಾಜ ೨೨
ಅಳವಂಡಿ ಮತ್ತು ಹೋರಾಟಗಳು: ಖಾದಿ ಆಂದೋಲನ ೨೩
ಅಳವಂಡಿಯಲ್ಲಿ ಚರಕ ಕೇಂದ್ರದ ಸ್ಥಾಪನೆ : ತಾಯಿಯ ಒಡವೆಗಳನ್ನು ಅಡವಿಟ್ಟು ಚರಕ ಕೇಂದ್ರ ಸ್ಥಾಪಿಸಿದ ಶಿವಮೂರ್ತಿ ಸ್ವಾಮಿಗಳು ೨೪
ಬಿಸರಹಳ್ಳಿಯಲ್ಲಿ ವಾಚನಾಲಯ ಸ್ಥಾಪನೆ ೨೫

ಅಳವಂಡಿಯಲ್ಲಿ ಗಾಂಧೀಜೀಯವರ ವಿಧಾಯಕ ಕಾರ್ಯಕ್ರಮಗಳು ೨೫
ವಂದೇ ಮಾತರಂ ಚಳುವಳಿ ೨೭
ಚಲೇಜಾವ್ ಚಳುವಳಿ ೨೮
೧೯೪೭ ರ ನಾಸಿಕ್ ಅಧಿವೇಶನದಲ್ಲಿ ಶಿವಮೂರ್ತಿ ಸ್ವಾಮಿಗಳು ೨೮
ಭುಗಿಲೆದ್ದ ಹೈದರಾಬಾದ್ ಪ್ರಾಂತ್ಯ ೨೯
ನಿಜಾಮನ ತಟಸ್ಥ ನೀತಿ : ಘಾಸಿಗೊಂದ ಜನತೆ ೨೯
ನಿಷೇಧದ ನಡುವೆಯೂ ಅಳವಂಡಿ ಭಾಗಗಳಲ್ಲಿ
ಸ್ವಾತಂತ್ರ್ಯದ ಆಚರಣೆ ೩೦
ಹೋರಾಟದ ಮುಖ್ಯ ವೇದಿಕೆಯಾಗಿ ಅಳವಂಡಿ ೩೧
ರಜಾಕಾರರ ಹಾವಳಿ : ಗಡಿಭಾಗದ ಪ್ರದೇಶಗಳ ಮೇಲೆ ನಿಗಾ ೩೨
ಮಹಾನುಭಾವ ಶಿವಮೂರ್ತಿ ಸ್ವಾಮಿ ಅಳವಂಡಿ ೩೩
ಸ್ವಾತಂತ್ರ್ಯ ಹೋರಾಟದಲ್ಲಿ ಅಳವಂಡಿ ಸಿದ್ಧೇಶ್ವರ ಮಠದ ಪಾತ್ರ ೩೩
ಭೂಗತ ಚಟುವಟಿಕೆಗಳು : ಅಳವಂಡಿ ಲೂಟಿ –
ಸಿದ್ಧೇಶ್ವರ ಮಠದ ಆಕ್ರಮಣ ೩೫
ಸಂತೆಗೆ ಹೋಗುವ ಮಹಿಳೆಯರ ಮೇಲೆ ದಾಳಿ :
ಸೇಡು ತೀರಿಸಿಕೊಂಡ ಹೋರಾಟಗಾರರು ೩೬
ಕವಲೂರು ಶಸ್ತ್ರಾಸ್ತ್ರ ಲೂಟಿ ೩೬
ಅಳವಂಡಿ ಸಮೀಪದ ಗಡಿಭಾಗ ‘ತಿಗರಿ’ಯ ಕರೋಡಗಿರಿ
ನಾಕಾ ವಶ ೩೭
ಬರದೂರಿನ ಕುರಿಗಾಹಿಗಳ ಬರ್ಬರ ಹತ್ಯೆ :
ಕೆರಳಿದ ಹೋರಾಟಗಾರರು ೩೮
ಬೆಳಗಟ್ಟಿ ಪ್ರಕರಣ : ಕಂದಾಯ ಅಧಿಕಾರಿಯನ್ನು ವಾಪಸ್ ಕಳಿಸಿದ್ದು ೩೮
ಕಾಡತೂಸುಗಳನ್ನು ತರುವಾಗ ಸಿಕ್ಕಿಬಿದ್ದ ಅಳವಂಡಿಯ
ಹೋರಾಟಗಾರರು ೩೮



ಬಿಸರಳ್ಳಿ ಗರಸಿನ ಸಾಧು ಮತ್ತು ಅಳವಂಡಿಯ
ಶಿವಮೂರ್ತಿ ಸ್ವಾಮಿಗಳ ಸಂಬಂಧ ೩೯
ಆಪರೇಷನ್ ಪೋಲೋ ೪೦
ಕೊಪ್ಪಳ ಭಾಗದ ಸ್ವಾತಂತ್ರ್ಯ ಹೋರಾಟಗಾರರು ೪೧
ಅಳವಂಡಿಯ ಸ್ವಾತಂತ್ರ್ಯ ಹೋರಾಟಗಾರರು ೪೧
ಮಾಹಿತಿಯ ಕೊರತೆ ಇರುವ ಅಳವಂಡಿಯ ಸ್ವಾತಂತ್ರ್ಯ
ಹೋರಾಟಗಾರರು ೪೧
ಆಕರ ಗ್ರಂಥಗಳು ೪೨
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೪೩

# ಸ್ವಾತಂತ್ರ್ಯ ಹೋರಾಟದಲ್ಲಿ 'ಅಳವಂಡಿ' ಗ್ರಾಮದ ಪಾತ್ರ

**ಭೌಗೋಳಿಕ ಪರಿಸರ :**

ಕೊಪ್ಪಳ ಜಿಲ್ಲೆ ಭೌಗೋಳಿಕವಾಗಿ ವಿಸ್ತಾರವಾದ ಒಣಭೂಮಿಯ ಪ್ರದೇಶ. ಕೃಷಿಯೇ ಇಲ್ಲಿ ಮುಖ್ಯ ಕಸುಬು. ಇಲ್ಲಿ ಜೋಳ, ನವಣೆ, ಸಜ್ಜೆ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಕಪ್ಪು (ಎರೆ) ಭೂಮಿ ಹೆಚ್ಚಾಗಿರುವುದರಿಂದ ಹತ್ತಿ, ಕಡಲೆ, ಬಿಳಿಜೋಳ, ಗೋಧಿಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಕೊಪ್ಪಳ ತಾಲೂಕಿನ ಅಳವಂಡಿಯ ಸುತ್ತಮುತ್ತ ಒಣಬೇಸಾಯ ಹೆಚ್ಚಾಗಿದ್ದು, ಇತ್ತೀಚಿಗೆ ಸಿಂಗಟಾಲೂರು ಏತ ನೀರಾವರಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ, ಉಪ್ಪಿನ–ಬೆಟಗೇರಿ, ಅಳವಂಡಿ ಮತ್ತಿತರ ಗ್ರಾಮಗಳಿಗೆ ನೀರಾವರಿಯ ಕನಸು ನನಸಾಗುತ್ತಿರುವದು ಖುಷಿಯ ವಿಚಾರ.

**ಒಂದಿಷ್ಟು ಹಿನ್ನೆಲೆ :**

ಇತಿಹಾಸದ ಪುಟಗಲ್ಲಿ ಅಳವಂಡಿಯು ಹಲವು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಇಲ್ಲಿಯ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ರಾಜಕೀಯ, ಹೋರಾಟಗಳ ಹಿನ್ನೆಲೆ ಬಹುವಿಸ್ತಾರವಾಗಿದೆ. ಇದೊಂದು ಗ್ರಾಮವಾಗಿದ್ದರೂ ಯಾವುದೇ ನಗರಕ್ಕಿಂತಲೂ ಕಡಿಮೆ ಇಲ್ಲದ ಐತಿಹಾಸಿಕತೆಯನ್ನು ಹೊಂದಿದೆ. ವಿವಿಧ ಕ್ಷೇತ್ರಗಳಲ್ಲಿ ನಾಡಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದ ಹಲವು ಮಹನೀಯರು ಅಳವಂಡಿಯವರು.

## ಮುಂಬೈ ಹಾಗೂ ಹೈದ್ರಾಬಾದ ಪ್ರಾಂತ್ಯಗಳ ಗಡಿ ವಿಚಾರ :

ಅಳವಂಡಿ ಗ್ರಾಮವು ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳು ಮುಂಬೈ ಪ್ರಾಂತ್ಯ ಹಾಗೂ ಹೈದರಾಬಾದ್ ಪ್ರಾಂತದ ಗಡಿಪ್ರದೇಶದ ಹಳ್ಳಿಗಳಾಗಿದ್ದವು. ಮುಂಬೈ ಪ್ರಾಂತ್ಯದ ಮುಂಡರಗಿ, ಹಳ್ಳಿಕೇರಿ, ಡಂಬಳ, ಬರದೂರು ಗ್ರಾಮಗಳು ಹೈದರಾಬಾದ್ ಪ್ರಾಂತದ ಅಳವಂಡಿ, ಕವಲೂರು, ಘಟ್ಟಿರೆಡ್ಡಿಹಾಳ ಮುಂತಾದ ಗ್ರಾಮಗಳ ಜನರು ವೈಯಕ್ತಿಕ ಸಂಬಂಧಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಆದರೆ ಹೈದರಾಬಾದಿನ ನಿಜಾಮನು, ರಜಾಕಾರರು, ಪೊಲೀಸರು ಮುಂಬೈ ಪ್ರಾಂತ್ಯದ ಜನರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದರು. ಅವರನ್ನು ಅನುಮಾನ ದೃಷ್ಟಿಯಿಂದ ನೋಡುತ್ತಿದ್ದರು. ಹೀಗಾಗಿ ಆಗಾಗ ಅನೇಕ ಕೆಟ್ಟ ಕೃತ್ಯಗಳು ಜರುಗುತ್ತಿದ್ದವು. ಗಡಿ ಭಾಗದ ಹಳ್ಳಿಗಳಲ್ಲಿ ದೌರ್ಜನ್ಯವೆನ್ನುವುದು ಸಾಮಾನ್ಯವಾಗಿದ್ದವು.

## ಬರಗಾಲದ ಬರೆಯ ವಿಚಾರ :

ಇಲ್ಲಿ ಮಳೆಯಾಶ್ರಿತ ಕೃಷಿ ಪ್ರದೇಶ ಹೆಚ್ಚಾಗಿರುವುದರಿಂದ ಅಕಾಲಿಕ, ಭೀಕರ ಬರಗಾಲಗಳು ಸಾಮಾನ್ಯ. 'ಮಳೆ ಬಂದರೆ ಬೆಳೆ' ಎನ್ನುವಂತಹ ಪರಿಸ್ಥಿತಿ ಈ ಹಿಂದೆಯೂ ಇತ್ತು. ಹಿಂದಿನಿಂದಲೂ ಹಲವು ಭೀಕರ ಬರಗಾಲಗಳಿಗೆ ಅಳವಂಡಿ ತುತ್ತಾಗಿದೆ. ಕ್ರಿ.ಶ. ೧೭೯೨ ರಿಂದ ಕ್ರಿ.ಶ. ೧೭೯೩ ರವರೆಗೆ ಹಾಗೂ ಕ್ರಿ.ಶ. ೧೮೭೬ ರಿಂದ ಕ್ರಿ.ಶ. ೧೮೭೮ ರ ಭೀಕರ ಬರಗಾಲವನ್ನು ಅಳವಂಡಿಯಲ್ಲಿ ಇದ್ದದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಕ್ರಿ.ಶ. ೧೯೪೧ ರಲ್ಲಿ ಬರಗಾಲದ ಜೊತೆಗೆ ಹಾಗೂ ಪ್ಲೇಗ್ ಮಹಾಮಾರಿ ಕಾಣಿಸಿಕೊಂಡಿತ್ತು. ಇಂತಹ ಮಾರಕ ಒಂದು ರೋಗಕ್ಕೆ ಊರಿಗೆ ಊರೇ ಸ್ಮಶಾನವಾಗಿ ರುದ್ರ ಭಯಾನಕ ಪರಿಸ್ಥಿತಿಯನ್ನು ಜನರು ಎದುರಿಸಿದರು. ಈ ಸಂದರ್ಭದಲ್ಲಿ ಆಗ ಅಳವಂಡಿ ಶಿವಮೂರ್ತಿ ಸ್ವಾಮಿ ಹಾಗೂ ಶಿರೂರು ವೀರಭದ್ರಪ್ಪನವರ ನಿಯೋಗವು ಹೈದರಾಬಾದಿನ ನಿಜಾಮರ ಬಳಿ ಹೋಗಿ ಬರಗಾಲದ ಮತ್ತು ಪ್ಲೇಗ್ ರೋಗದ ಬಗ್ಗೆ ಇರುವ ಪರಿಸ್ಥಿತಿಯನ್ನು ಭಿನ್ನವಿಸಿಕೊಂಡರು. ಆದರೆ ನಿಜಾಮನು ನೀಡಿದ ಉಡಾಫೆಯ ಉತ್ತರ ಈಗಲೂ ಈ ಭಾಗದ ಜನತೆ ಸಂದರ್ಭಕ್ಕೆ ತಕ್ಕಂತೆ ಬಳಸುವ 'ಹಾಸ್ಯಭರಿತ ನಗೆಹನಿ'ಯಾಗಿ ಪರಿಣಮಿಸಿದೆ.



## ಶಿಕ್ಷಣದ ಸ್ಥಿತಿಗತಿ :

ಅಂದು ಅಳವಂಡಿ ಭಾಗದಲ್ಲಿ ಶಿಕ್ಷಣದ ವ್ಯವಸ್ಥೆ ಅಷ್ಟೊಂದು ಸುಧಾರಿಸಿದ್ದಿಲ್ಲ. ಈ ಭಾಗದಲ್ಲಿ ಹೋಬಳಿಗೆ ೩ ರಿಂದ ೪ ಪ್ರಾಥಮಿಕ ಶಾಲೆಗಳು ಮಾತ್ರ ಇದ್ದವು. ಶಿಕ್ಷಣದ ಪರಿಸ್ಥಿತಿ ತುಂಬಾ ದುಸ್ಥಿತಿಯಲ್ಲಿತ್ತು. ಉನ್ನತ ವ್ಯಾಸಂಗಕ್ಕೆ ದೂರದ ಹೈದರಾಬಾದ್‌ನ್ನೇ ಅವಲಂಬಿಸಬೇಕಾಗಿತ್ತು. ಪಕ್ಕದ ಮುಂಬೈ ಪ್ರಾಂತ್ಯದ ಗಡಿ ಪ್ರದೇಶಗಳಲ್ಲಿ ಶಿಕ್ಷಣದ ವ್ಯವಸ್ಥೆ ಉತ್ತಮವಾಗಿತ್ತಾದರೂ, ಇದರಿಂದ ಅಳವಂಡಿ ಪ್ರದೇಶದ ಜನರಿಗೆ ಅನುಕೂಲವಾಗಿರಲಿಲ್ಲ. ಆದರೆ 'ಅಳವಂಡಿ'ಯು ಶಿಕ್ಷಕರ ತವರೂರು ಎಂದು ಖ್ಯಾತಿಯನ್ನು ಪಡೆದಿದೆ. ಮನೆಗೊಬ್ಬರಂತೆ ಶಿಕ್ಷಕರನ್ನು ಇಲ್ಲಿ ಗುರುತಿಸಬಹುದು.

## ಹೋರಾಟದ ಹಿನ್ನೆಲೆ :

ಭಾರತ ಸ್ವಾತಂತ್ರ್ಯಕ್ಕೆ ಕನ್ನಡ ನೆಲದ ಕೊಡುಗೆ ಗಣನೀಯವಾಗಿದೆ. ಹೈದರಾಬಾದ್–ಕರ್ನಾಟಕದ ಪ್ರಾಂತ್ಯದಲ್ಲಿ ಬರುವ ತಿರುಳ್ಗನ್ನಡ ಪ್ರದೇಶಗಳಲ್ಲಿ ಒಂದಾದ ಕೊಪ್ಪಳದ ಹೋರಾಟಗಳು ಮನನೀಯವಾಗಿವೆ.

ಕ್ರಿ.ಶ. ೧೬೦೦ ರಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಭಾರತದಲ್ಲಿ ವ್ಯಾಪಾರಕ್ಕೆಂದು ಕಾಲಿಟ್ಟು, ಕ್ರಮೇಣ ಇಡೀ ಭಾರತವನ್ನೇ ತಮ್ಮ ಅಧೀನದಲ್ಲಿರಿಸಿಕೊಂಡು ಆಡಳಿತ ನಡೆಸಿದರು. ಪರಕೀಯರ ಆಳ್ವಿಕೆಯಿಂದ ಬೇಸತ್ತು ಹದಿನೆಂಟನೇ ಶತಮಾನದಲ್ಲಿ ಭಾರತದ ಹಲವು ಕಡೆ ಬ್ರಿಟಿಷ್ ಸರಕಾರದ ವಿರುದ್ಧವಾಗಿ ಇಲ್ಲಿಯ ರಾಜ, ರಾಣಿಯರು ಬಂಡೇಳತೊಡಗಿದರು. ಕರ್ನಾಟಕದಲ್ಲಿಯೂ ಇಂತಹ ಹೋರಾಟಗಳು ನಡೆದವು. ಕಿತ್ತೂರು ಚನ್ನಮ್ಮ, ನರಗುಂದದ ಬಾಬಾಸಾಹೇಬ, ಹಂದಿಗನೂರ ದೇಸಾಯಿ, ಕೊಪ್ಪಳದಲ್ಲಿ ಭೀಮರಾಯರು, ಹಮ್ಮಿಗಿ ಕೆಂಚನ ಗೌಡ ದೇಸಾಯಿಯವರು ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದರು.

ಅಂದು ಅಂಕುರಿಸಿದ ಆ ಹೋರಾಟದ ಬೀಜ ಮುಂದೊಂದು ದಿನ ಕೊಪ್ಪಳದ ಮತ್ತು ಕೊಪ್ಪಳದ ಸುತ್ತಮುತ್ತಲ ಗ್ರಾಮಗಳಲ್ಲಿ ಬ್ರಿಟಿಷರ ವಿರುದ್ಧ ಬೃಹತ್ ಸಮರದವರೆಗೂ ಸಾಗಿ ಸ್ವಾತಂತ್ರ್ಯ ಹೋರಾಟದ ಫಲ

ಪಡೆಯುವವರೆಗೂ ಆನಂತರದ ಹೈದರಾಬಾದ ಪ್ರಾಂತ್ಯ ವಿಮೋಚನೆ ಹೊಂದುವವರೆಗೂ ಬಂದು ತಲುಪಿತು.

ಸ್ವಾತಂತ್ರ್ಯ ಮತ್ತು ವಿಮೋಚನೆಯ ಎರಡೂ ಹೋರಾಟಗಳಲ್ಲಿ ಕೊಪ್ಪಳ ತಾಲ್ಲೂಕಿನ 'ಅಳವಂಡಿ' ಗ್ರಾಮ ತನ್ನದೇ ಕೊಡುಗೆಯನ್ನು ನೀಡಿದೆ. 'ಅಳವಂಡಿ' ಗ್ರಾಮದ ಹೆಸರು ಮಹಾತ್ಮಾ ಗಾಂಧೀಜಿಯವರಿಂದ ಹಿಡಿದು ಎಲ್ಲ ನಾಯಕರುಗಳಲ್ಲಿ ಹರಿದಾಡುತ್ತಿತ್ತು. ರಾಷ್ಟ್ರಮಟ್ಟದಲ್ಲಿ 'ಅಳವಂಡಿ' ಗ್ರಾಮ ಸ್ವಾತಂತ್ರ್ಯ ಮತ್ತು ವಿಮೋಚನೆಯ ಹೋರಾಟಗಳಲ್ಲಿ ಖ್ಯಾತಿ ಪಡೆದಿತ್ತು.

## ಜಮೀನುದಾರ ವೀರಪ್ಪ ದೇಸಾಯಿಯವರ ಸಶಸ್ತ್ರ ಬಂಡಾಯದಲ್ಲಿ ಅಳವಂಡಿಯ ಪಾತ್ರ – ೧೮೮೯

೧೮೭೯ ರ ಕೊನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿಯುತ್ತಾನೆ. ಟಿಪ್ಪುವಿನ ದೆಸೆಯಿಂದ ಆತನ ಅಧೀನದಲ್ಲಿದ್ದ ಕೊಪ್ಪಳ 'ಸುಲ್ತಾನ ಗಡ' ಎಂಬ ಹೆಸರನ್ನು ಹೊಂದಿತ್ತು. ೧೮೭೯ ರ ಯುದ್ಧದಲ್ಲಿ ಬ್ರಿಟೀಷರೊಂದಿಗೆ ಸೆಣಸಾಡಿ ಮಡಿದ ನಂತರ ಕೊಪ್ಪಳವು ಹೈದರಾಬಾದಿನ ನಿಜಾಮನಿಗೆ ಹಸ್ತಾಂತರವಾಗುತ್ತದೆ.

ಆಗ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳಾಗುತ್ತವೆ. ಬಹುಸಂಖ್ಯಾತ ಹಿಂದೂಗಳ ಮೇಲೆ ಮುಸ್ಲಿಂ ರ ಆಡಳಿತ ಕಸಿವಿಸಿಯುಂಟು ಮಾಡುತ್ತದೆ. ಈ ಮೊದಲು ಇಲ್ಲಿ ಕರ ವಸೂಲಿಯ ಮತ್ತು ಸ್ಥಳೀಯ ಆಡಳಿತದ ಚುಕ್ಕಾಣಿ ಹಿಡಿದಿದ್ದ ಮನೆತನಗಳು ತಮ್ಮ ಪ್ರಾತಿನಿಧ್ಯ ಕಳೆದುಕೊಳ್ಳುತ್ತವೆ. ಸಾಮಾನ್ಯ ಜನರ ಮೇಲೆಯೂ ತೆರಿಗೆ ಸಂಗ್ರಹದಲ್ಲಿ ಕಿರುಕುಳವನ್ನು ನೀಡಲಾಗುತ್ತಿತ್ತು. ಬ್ರಿಟೀಷರ ತಾಳಕ್ಕೆ ಕುಣಿಯುತ್ತಿದ್ದ ನಿಜಾಮನ ಅಧಿಕಾರಿಗಳು ರಾಜ್ಯ ಬೊಕ್ಕಸ ತುಂಬಿಸುವ ಭರದಲ್ಲಿ ಸ್ಥಳೀಯರ ವಿರೋಧ ಕಟ್ಟಿಕೊಳ್ಳಬೇಕಾಯಿತು.

ದೇಸಾಯಿ ಮನೆತನವು ಬಹಳ ಗಟ್ಟಿ ಮನೆತನವೆಂದು ಹೆಸರು ಪಡೆದಿತ್ತು. ಕಲಕೇರಿ ದೇಸಾಯಿ ಮನೆತನದ ಆರನೆಯ ಮಲ್ಲಪ್ಪ ದೇಸಾಯಿಯವರ ಹಿರಿಯ ಮಗ ಅಗರ್ಭ ಶ್ರೀಮಂತರಾಗಿದ್ದ ವೀರಪ್ಪ ದೇಸಾಯಿ ಶ್ರೀಮಂತಿಕೆಯ ಸುಪ್ಪತ್ತಿಗೆಯ ಜೀವನ ಬಿಟ್ಟು, ನಿಜಾಮನ ವಿರುದ್ಧ ಸಮರ ಸಾರಿ ಸ್ವಾಭಿಮಾನ ಮರೆಯುತ್ತಾನೆ.



ಕೊಪ್ಪಳದ ಗಡಿ ಭಾಗಗಳಲ್ಲಿ ವೀರಪ್ಪ ದೇಸಾಯಿಯವರ ಪ್ರಭಾವ ಹೆಚ್ಚಾದಂತೆ ನಿಜಾಮನ ಸೈನ್ಯ ಏಕಾಂಗಿಯಾಗಿ ವೀರಪ್ಪ ದೇಸಾಯಿಯವರನ್ನು ಎದುರಿಸಲಾಗಲಿಲ್ಲ. ಮರಾಠರಿಗೆ ಸಹಾಯ ಮಾಡಿ ತಮಗೆ ಹಿನ್ನಡೆಯಾಗುವಂತೆ ಮಾಡಿದ್ದ ವೀರಪ್ಪ ದೇಸಾಯಿಯವರ ವಿರುದ್ಧ ಬ್ರಿಟೀಷರೂ ಕುದಿಯುತ್ತಿದ್ದರು. ಈ ನಡುವೆ ಕೊಪ್ಪಳ ಮತ್ತು ಬಹದ್ದೂರ ಬಂಡಿಯ ಕೋಟೆಗಳು ವೀರಪ್ಪ ದೇಸಾಯಿಯವರ ವಶವಾಗುತ್ತವೆ.

ಕೊಪ್ಪಳ ಮತ್ತು ಬಹದ್ದೂರ ಬಂಡಿಯ ಕೋಟೆಗಳನ್ನು ಮರಳಿ ತನ್ನ ವಶಕ್ಕೆ ಪಡೆದುಕೊಳ್ಳಲು ನಿಜಾಮನೊಬ್ಬನೇ ಅಸಹಾಯಕನಾಗುತ್ತಾನೆ. ಒಂದು ಘನಘೋರ ಹೋರಾಟಕ್ಕೆ ನಿಜಾಮನಿಗೆ ಬ್ರಿಟೀಷರು ಸಹಾಯವಾಗುತ್ತಾರೆ. ಈ ಯುದ್ಧದಲ್ಲಿ ವೀರಪ್ಪ ದೇಸಾಯಿ, ಅವರ ಸಹೋದರ ಸೋಮಪ್ಪ ದೇಸಾಯಿ ಮತ್ತು ೫೦೦ ದೇಶಭಕ್ತರ ಸೈನ್ಯವು ಕಲಿತನದಿಂದ ಹೋರಾಡುತ್ತದೆ. ಬ್ರಿಟೀಷರು ಸಾವಿರಾರು ಸಂಖ್ಯೆಯಲ್ಲಿ ಸೈನಿಕರನ್ನು, ಕುದುರೆ ದಳವನ್ನು ಕರೆಸಿಕೊಂಡು, ಪರಿಣಿತ ಯುದ್ಧ ಕಲಿಗಳನ್ನು ಕರೆಸಿಕೊಳ್ಳುತ್ತದೆಯಾದರೂ ಆರಂಭಿಕವಾಗಿ ಯಶಸ್ಸನ್ನು ಗಳಿಸಲು ಸಾಧ್ಯವಾಗುವುದಿಲ್ಲ.

ಬ್ರಿಟಿಷರ ಒಂದು ಪಡೆ ಗದಗ–ಡಂಬಳದ ಮೂಲಕ ಅಳವಂಡಿಯಲ್ಲಿ ಮೇ ೭, ೧೮೮೯ ರಂದು ಬಿಡಾರ ಹೂಡುತ್ತಾರೆ. ಇದಕ್ಕೆ ಕಾರಣ ವೀರಪ್ಪ ದೇಸಾಯಿಯವರ ಊರಾದ ಕಲಕೇರಿ ಮತ್ತು ಕೊಪ್ಪಳಕ್ಕೆ ಮಧ್ಯದಲ್ಲಿರುವುದೇ ಈ ಅಳವಂಡಿ. ಈ ಮಾರ್ಗವಾಗಿ ಕಲಕೇರಿಯಿಂದ ಕೊಪ್ಪಳಕ್ಕೆ ಶಸ್ತ್ರಾಸ್ತ್ರ, ಆಹಾರ ಮತ್ತಿತರ ಸಹಾಯವನ್ನು ಬ್ರಿಟೀಷರು ತಪ್ಪಿಸಬೇಕಾಗಿತ್ತು.

ಹಲವು ದಿನಗಳ ಕೆಚ್ಚೆದೆಯ ಹೋರಾಟದ ನಡುವೆಯೂ ವೀರಪ್ಪ ದೇಸಾಯಿಯವರು ಬ್ರಿಟೀಷರ ತಂತ್ರದ ಎದುರು ಹಿನ್ನಡೆ ಅನುಭವಿಸಿ, ರೋಚಕವಾಗಿ ಯಾರ ಕೈಯಲ್ಲಿಯೂ ಸಿಕ್ಕಿ ಹಾಕಿಕೊಳ್ಳದೇ ತಪ್ಪಿಸಿಕೊಂಡು ಹೋಗುತ್ತಾರೆ. ವೀರಪ್ಪ ದೇಸಾಯಿಯವರ ಈ ಹಿನ್ನಡೆಯ ಹಲವು ಕಾರಣಗಳಲ್ಲಿ 'ಅಳವಂಡಿ'ಯ ಮಾರ್ಗ ಮುಚ್ಚಿದ್ದೂ ಒಂದು. ಒಂದು ವೇಳೆ ಅಳವಂಡಿಯ ಮಾರ್ಗ ತೆರೆದಿದ್ದರೆ ಬ್ರಿಟೀಷರಿಗೆ ಇನ್ನೂ ಹಿನ್ನಡೆಯಾಗಬಹುದಾಗಿತ್ತೇನೋ?

ಹೀಗೆ ಅಳವಂಡಿಯೊಂದಿಗೆ ಕೊಪ್ಪಳದ ಮೊದಲ ಸಶಸ್ತ್ರ ಬಂಡಾಯ ಹೋರಾಟ ನಿಕಟ ಸಂಬಂಧವನ್ನು ಹೊಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

**ಮುಂಡರಗಿ ಭೀಮರಾಯರ ಹೋರಾಟದಲ್ಲಿ ಅಳವಂಡಿ :**

ಪ್ರಾಮಾಣಿಕತೆ ಮತ್ತು ಸ್ವ ಯೋಚನೆಗೆ ಹೆಸರಾಗಿದ್ದ ಮುಂಡರಗಿ ಭೀಮರಾಯ ಈ ನೆಲದ ಸ್ವಾಭಿಮಾನದ ಸಂಕೇತವಾಗಿ ಹಮ್ಮಿಗೆಯ ಕೆಂಚನಗೌಡ ದೇಸಾಯಿಯವರ ಜೊತೆಗೂಡಿ ಕೊಪ್ಪಳದ ಕೋಟೆಯಲ್ಲಿ ಬ್ರಿಟೀಷರ ಜೊತೆ ಕಾದಾಡಿ ಪ್ರಾಣತ್ಯಾಗ ಮಾಡುತ್ತಾರೆ. ಈ ಹೋರಾಟದ ಪ್ರಮುಖರಾದ ಭೀಮರಾಯರ ಮುಂಡರಗಿ ಮತ್ತು ಕೆಂಚನಗೌಡರ ಹಮ್ಮಿಗೆ ಗ್ರಾಮ ಅಳವಂಡಿಯ ಹತ್ತಿರವೇ ಇವೆ. ಹೀಗಾಗಿ ಅಳವಂಡಿಯ ನೆಲದ ಮೇಲೆ ಈ ಹೋರಾಟದ ಕುರುಹುಗಳನ್ನು ಗಮನಿಸಬಹುದಾಗಿದೆ.

ಆನಂತರದ ದಿನಗಳಲ್ಲಿ ಬ್ರಿಟೀಷ ಸರಕಾರವು ನೇರವಾಗಿ ಭಾರತದ ಆಡಳಿತ ಯಂತ್ರದ ಚುಕ್ಕಾಣಿ ಹಿಡಿಯಿತು. ತದನಂತರ ಆಡಳಿತದ ಬದಲಾವಣೆಗಳನ್ನು ತಂದಿತಾದರೂ, ನಮ್ಮವರ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ೧೯ ನೇ ಶತಮಾನದ ಹೊತ್ತಿಗೆ ನಿಜಾಮರ ಆಡಳಿತದಲ್ಲಿ ಹಲವು ನೋವುಗಳನ್ನುಂಡ ಈ ಭಾಗದ ಜನತೆ ಹೋರಾಟಗಳ ಮೂಲಕವೇ ತನ್ನತನ ಉಳಿಸಿಕೊಂಡಿತು. ತನ್ನತನಕ್ಕೆ ಪೆಟ್ಟುಕೊಟ್ಟಾಗಲೆಲ್ಲ ಚಳುವಳಿಗಳಿಗೆ, ಹರತಾಳಗಳಿಗೆ, ಹೋರಾಟಗಳಿಗೆ ಮೊರೆ ಹೋಗಿ ಸ್ವಾಭಿಮಾನದ ಪ್ರತೀಕವಾಗುಳಿಯಿತು.

**ನಿಜಾಮನ ಜಾತಿ ಪ್ರೇಮದ ವಿರುದ್ಧ ಆರ್ಯ ಸಮಾಜ :**

ಅಳವಂಡಿ ಭಾಗದಲ್ಲಿ ಆರ್ಯ ಸಮಾಜವು ಪ್ರಮುಖ ಪಾತ್ರವನ್ನು ವಹಿಸಿದೆ. ಅಂಧಶ್ರದ್ಧೆಯ ಧಾರ್ಮಿಕ ಮನೋಭಾವದ ನಿಜಾಮನು ಆಳ್ವಿಕೆಯಿಂದ ಹಿಡಿದು, ಎಲ್ಲದರಲ್ಲೂ ತಾರತಮ್ಯವನ್ನು ಮಾಡುತ್ತಿದ್ದನು. ಹೈದರಾಬಾದ್ ನಿಜಾಮನ ವಂಶದವರು ಹಿಂದೂ–ಮುಸ್ಲಿಂ ಎಂಬ ಭೇದದ ನೀತಿಯನ್ನು ಅನುಸರಿಸುತ್ತಾ ಬಂದರು. ಶಿಕ್ಷಣ ಹಾಗೂ ರಾಜಕೀಯ ಅಧಿಕಾರದ ನೌಕರಿಗಳಲ್ಲಿ ಹಾಗೂ ಆರ್ಥಿಕ ನೀತಿಯಲ್ಲಿ ತಮ್ಮ ನಿಲುವನ್ನು ಮುಸ್ಲಿಮರ ಪರ ನೀತಿಯನ್ನು



ಘೋಷಿಸಿತು. ಇದು ಇನ್ನುಳಿದ ಧರ್ಮೀಯರಿಗೆ ಇರುಸು ಮುರುಸುಂಟಾಯಿತು. ಮುಸ್ಲಿಂರ ಸಂಖ್ಯೆ ಹೆಚ್ಚಾಗಬೇಕು ಎಂಬ ಹುಚ್ಚು ಕಲ್ಪನೆಯಿಂದ ಮತಾಂತರಕ್ಕೆ ಮಾರ್ಗ ಕಲ್ಪಿಸಿದರು. ಮತಾಂತರಕ್ಕೆ ಹರಿಜನರನ್ನು ಅಂದರೆ ಅಸ್ಪೃಶ್ಯರನ್ನು ಸೆಳೆಯುತ್ತಿದ್ದರು. ಅವರಿಗೂ ಹಿಂದೂ ಧರ್ಮದ ಜಾತಿ ಪದ್ಧತಿಯಿಂದ ಅವಮಾನವಾಗಿತ್ತು. ಈ ಸಂದರ್ಭದಲ್ಲಿ ಆರ್ಯ ಸಮಾಜವು ಹಿಂದೂ ಧರ್ಮದಲ್ಲಿ ಹೊಸ ಚೈತನ್ಯವನ್ನು ಮೂಡಿಸಿ, 'ವೇದಗಳಿಗೆ ಹಿಂತಿರುಗಿ' ಎಂಬ 'ಶುದ್ಧೀಕರಣದ ತತ್ವ' ವನ್ನು ರೂಪಿಸುತ್ತಾರೆ. ಹಿಂದೂಗಳಲ್ಲಿ ಶುದ್ಧೀಕರಣ ಮಾಡಿದ ಕೀರ್ತಿ ಆರ್ಯ ಸಮಾಜಕ್ಕೆ ಸಲ್ಲುತ್ತದೆ. ಕೊಪ್ಪಳದ ಅಳವಂಡಿ ಹತ್ತಿರವಿರುವ ಉಪ್ಪಿನ ಬೆಟಗೇರಿ ಮುಂತಾದ ಕಡೆ ಅಸ್ಪೃಶ್ಯತೆ ನಿವಾರಣೆಯ ಜೊತೆ ಜೊತೆಗೆ ಶಿಕ್ಷಣದ ಜಾಗೃತಿಗಾಗಿ, ಭಾರತೀಯರಿಗೆ ರಾಷ್ಟ್ರೀಯತೆಯ, ಭಾವೈಕ್ಯತೆಯ ಮುಂತಾದ ತತ್ವಗಳನ್ನು ಸಾರಿ ಹಿಂದೂಗಳನ್ನು ಸಂಘಟಿತರಾಗುವಂತೆ ಆರ್ಯ ಸಮಾಜವು ಪ್ರಮುಖ ಪಾತ್ರವಹಿಸಿತು.

**ಅಳವಂಡಿ ಮತ್ತು ಹೋರಾಟಗಳು**

**ಖಾದಿ ಆಂದೋಲನ :**

ಗಾಂಧೀಜಿ ಎನ್ನುವ ಮಹಾಶಕ್ತಿ ರಾಷ್ಟ್ರೀಯ ಆಂದೋಲನದ ನಾಯಕತ್ವ ವಹಿಸಿದಾಗ ಇಡೀ ದೇಶಕ್ಕೆ ದೇಶವೇ ಬದಲಾಯಿತು. ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಿಂದ ದೇಶದ ಹಳ್ಳಿ ಹಳ್ಳಿಗಳು ಜಾಗೃತವಾದವು. ಜನತೆ ಗಾಂಧೀಜಿಯವರ ಹೆಜ್ಜೆಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡರು. ಗಾಂಧೀ, ಖಾದಿ, ಸಮಾನತೆ, ಚರಕ, ಸ್ವಾತಂತ್ರ್ಯ ಎನ್ನುವ ಶಬ್ದಗಳು ದೇಶಭಕ್ತರನ್ನು ಬಡಿದೆಬ್ಬಿಸಿದವು. ಈ ಸಂದರ್ಭದಲ್ಲಿ ಸ್ವದೇಶಿ ವಸ್ತುಗಳ ಬಳಕೆಗಾಗಿ ಖಾದಿ ಪ್ರಚಾರ ಆರಂಭವಾಯಿತು. ರಾಷ್ಟ್ರೀಯ ಜಾಗೃತಿಯಲ್ಲಿ 'ಖಾದಿ ಆಂದೋಲನ'ವು ಭಾರತ ಸ್ವಾತಂತ್ರ್ಯ ಹೋರಾಟದ ಮೊದಲ ಭಾಗವೆಂಬಂತೆ 'ಚರಕ ಚಲಾಯೇಂಗೆ ಸ್ವರಾಜ್ ಲೇಂಗೆ' ಎಂಬ ಘೋಷಣೆಯೊಂದಿಗೆ ಆರಂಭವಾಯಿತು.

ರಾಷ್ಟ್ರದಲ್ಲೆಡೆ ಖಾದಿ ಪ್ರಚಾರ ೧೯೨೦ ರಿಂದ ೧೯೨೫ ರ ವರೆಗೆ ನಡೆಯಿತು. ೧೯೨೫ ರಲ್ಲಿ 'ಚರಕಾ ಸಂಘ'ದ ಅಧ್ಯಕ್ಷರಾಗಿ ಗಾಂಧೀಜಿ

ನೇಮಕವಾದರು. 'ಕರ್ನಾಟಕದ ಗಾಂಧಿ' ಹರ್ಡೇಕರ್ ಮಂಜಪ್ಪನವರು ಕರ್ನಾಟಕದ ನೆಲದಲ್ಲಿ ಖಾದಿಯ ಪ್ರಚಾರದ ಹೊಣೆ ಹೊತ್ತರು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಗಾಂಧೀಜಿ 'ಚರಕಾ ಸಂಘ'ದ ಅಧ್ಯಕ್ಷರಾಗುವ ೩ ವರ್ಷಗಳ ಮೊದಲೇ ಗಾಂಧೀಜಿಯವರ ಆಶಯವಾದ ಚರಕ ಮತ್ತು ಖಾದಿಗೆ ಜೀವ ಕೊಟ್ಟದ್ದು ಅಳವಂಡಿ ಎನ್ನುವ ಅಂಶ. ಅಂದರೆ ೧೯೨೨ ಕ್ಕಿಂತ ಮುಂಚೆಯೇ ಅಳವಂಡಿ ಗ್ರಾಮದ ಉಪ್ಪಿನಬೆಟಗೇರಿಯಲ್ಲಿ ಅಂದಿನ ಕಾಂಗ್ರೆಸ್ ಕಾಂಗ್ರೆಸ್ ಪಕ್ಷದ ಪಿ.ಜಿ. ಕುಲಕರ್ಣಿಯವರ ದೆಸೆಯಿಂದ 'ಚರಕ ಕೇಂದ್ರ' ಸ್ಥಾಪನೆಯಾಯಿತು.

ಗಾಂಧೀಜಿಯ ಸಬರಮತಿ ಆಶ್ರಮದಲ್ಲಿದ್ದು ಬಂದ ರಾಮಚಂದ್ರ ವಡವಿ ಎನ್ನುವ ದೇಶಭಕ್ತರು ಮುಂದೆ ಈ ಚರಕಾ ಕೇಂದ್ರಕ್ಕೆ ಹೊಸ ರೂಪ ಕೊಟ್ಟರು.

## ಅಳವಂಡಿಯಲ್ಲಿ ಚರಕ ಕೇಂದ್ರದ ಸ್ಥಾಪನೆ :

### ತಾಯಿಯ ಒಡವೆಗಳನ್ನು ಅಡವಿಟ್ಟು ಚರಕ ಕೇಂದ್ರ ಸ್ಥಾಪಿಸಿದ ಶಿವಮೂರ್ತಿ ಸ್ವಾಮಿಗಳು

೧೯೩೪ ರ ಸುಮಾರಿಗೆ ಕೊಪ್ಪಳದಲ್ಲಿ, ೧೯೩೭ ರಲ್ಲಿ ಗೊಂಡಬಾಳದಲ್ಲಿ ಖಾದಿ ಕೇಂದ್ರಗಳ ಆರಂಭವಾಯಿತು. ಸೋಮಣ್ಣ ಕುದರಿಮೋತಿ, ಸಿದ್ಧಪ್ಪ ಮಾಸ್ತರ ಮತ್ತು ಬೀಡ್ನಾಳ ದೇಸಾಯಿಯವರ ಪ್ರಯತ್ನದಿಂದ ಕಿನ್ನಾಳದಲ್ಲಿಯೂ ಚರಕ ಕೇಂದ್ರಗಳ ಸ್ಥಾಪನೆಯಾಯಿತು.

ಅಳವಂಡಿಯಲ್ಲಿ ೧೯೪೨ ರಲ್ಲಿ ಶಿವಮೂರ್ತಿ ಸ್ವಾಮಿಗಳು ತಮ್ಮ ಕಾಲೇಜಿನ ಅಭ್ಯಾಸವನ್ನು ಮೊಟಕುಗೊಳಿಸಿ ಊರಿಗೆ ಬಂದು ತಮ್ಮ ತಾಯಿಯ ಆಶೀರ್ವಾದ ಪಡೆದರು. ನಂತರ ಅವರ ತಾಯಿಯವರಿಂದ ಬಂಗಾರದ ಬಳೆಗಳನ್ನು ಅಡವಿಟ್ಟು 'ಚರಕ ಕೇಂದ್ರ'ವನ್ನು ತಮ್ಮ ಸಿದ್ಧೇಶ್ವರ ಮಠದಲ್ಲಿ ಪ್ರಾರಂಭಿಸಿದರು. ದೇಶಕ್ಕಾಗಿ ತಮ್ಮ ಆಸ್ತಿ, ಒಡವೆಗಳನ್ನು ಒತ್ತೆ ಇಟ್ಟು ಆ ಮಹಾ ತಾಯಿಯು ಇತರ ಮಹಿಳೆಯರಿಗೆ ಮತ್ತು ಎಲ್ಲ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯಾದರು.



## ಬಿಸರಹಳ್ಳಿಯಲ್ಲಿ ವಾಚನಾಲಯ ಸ್ಥಾಪನೆ :

ಸ್ವಾತಂತ್ರ್ಯ ಹೋರಾಟಕ್ಕಾಗಿ ಅಳವಂಡಿ ಬಳಿಯ ಬಿಸರಳ್ಳಿ ಗ್ರಾಮ ಪ್ರಮುಖ ಪಾತ್ರವಹಿಸಿದೆ. ದೇಶಭಕ್ತಿಯನ್ನೇ ಮೈಗೂಡಿಸಿಕೊಂಡಿದ್ದ ಯುವಕರು 'ವಾಚನಾಲಯ'ದ ಅವಶ್ಯಕತೆಯನ್ನು ಮನಗಾಣುತ್ತಾರೆ. ಸ್ವಾತಂತ್ರ್ಯ ಹೋರಾಟದ ತಿಳುವಳಿಕೆಗಾಗಿ ಅಂದು ರೇಡಿಯೋ ಮತ್ತು ಪತ್ರಿಕೆಗಳೇ ಆಧಾರವಾಗಿದ್ದವು. ಆದ್ದರಿಂದ ಪತ್ರಿಕೆಗಳು, ಪುಸ್ತಕಗಳು ರಾಷ್ಟ್ರೀಯತೆಯನ್ನು ಜಾಗೃತಿಗೊಳಿಸುವ ಸಾಧನಗಳೆಂದು ಮನಗಂಡು ಪಂಚಾಕ್ಷರಿ ಹಿರೇಮಠ, ಶರಣಬಸವರಾಜ ಬಿಸರಳ್ಳಿ, ಹಿರೇಗೌಡರು, ಮಾಲಿಪಾಟೀಲರು ಮೊದಲಾದವರು ಕೂಡಿಕೊಂಡು ತನು–ಮನ–ಧನದ ಸೇವೆ ಸಲ್ಲಿಸಿದ್ದರ ಫಲವಾಗಿ ಗ್ರಾಮದ ಹಿರೇಗೌಡ ಮಾಲಿಪಾಟೀಲರ ಹೊಸ ಮನೆಯನ್ನೇ ವಾಚನಾಲಯವಾಗಿ ಬದಲಾಯಿಸಿದರು.

ಈಗಲೂ ಈ ಕಟ್ಟಡಕ್ಕೆ 'ಲೈಬ್ರರಿ' ಎಂದೇ ಸ್ಥಳನಾಮವಾಗಿದೆ. ಬಿಸರಳ್ಳಿ ಗ್ರಾಮದಲ್ಲಿ ಗಾಂಧೀಜಿಯವರ ಚಿತಾಭಸ್ಮವನ್ನು ತಂದು 'ಗಾಂಧಿ ಕಟ್ಟೆ'ಯನ್ನು ಕಟ್ಟಿದ್ದಾರೆ. ಆರ್ಯ ಸಮಾಜದ ನಾರಾಯಣ ಮೂರ್ತಿ ವೇದಪಾಠಕ ಅವರು ಅರಸಿನ ಸಾಧು ಅವರ ಪ್ರಭಾವದಿಂದ ಪಂಚಾಕ್ಷರಿ ಹಿರೇಮಠ, ಬಸವರಾಜ್ ಬಿಸರಳ್ಳಿಯವರು ಮಹಾತ್ಮ ಗಾಂಧಿಯವರ ಚಿತಾಭಸ್ಮವನ್ನು ಗುಲ್ಬರ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಸರ್ದಾರ್ ವೀರನಗೌಡರಿಂದ ಪಡೆದು ತಂದಿದ್ದರು ಎಂಬ ಅಂಶ ತಿಳಿದುಬರುತ್ತದೆ.

ಬಿಸರಳ್ಳಿ ಗ್ರಾಮದಲ್ಲಿ ಇಂದಿಗೂ ಈ ಸ್ಥಳದಲ್ಲಿ ರಾಷ್ಟ್ರೀಯ ದಿನಗಳಂದು ಧ್ವಜ ಏರಿಸಿ ದೇಶಕ್ಕೆ ನಮನವನ್ನು ಸಲ್ಲಿಸುತ್ತಾರೆ.

## ಅಳವಂಡಿಯಲ್ಲಿ ಗಾಂಧೀಜೀಯವರ ವಿಧಾಯಕ ಕಾರ್ಯಕ್ರಮಗಳು :

ಮಹಾತ್ಮ ಗಾಂಧೀಜಿಯವರು ಎಲ್ಲರನ್ನೂ ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಇಡೀ ದೇಶವೂ ಗಾಂಧೀಜಿಯರನ್ನು ಬಹುಗೌರವದಿಂದ ಕಾಣುತ್ತಿತ್ತು. ಜನಸಾಮಾನ್ಯರಿಗಂತೂ ಗಾಂಧಿ ಎನ್ನುವುದು ಮಹಾಶಕ್ತಿಯಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ದೇಶದ ಎಲ್ಲರೂ ಒಗ್ಗಟ್ಟಾಗಿ ಭಾಗವಹಿಸಿದರೆ ಮಾತ್ರ ಯಶಸ್ಸು ಸಾಧ್ಯವೆಂದು ಅವರಿಗೆ ಗೊತ್ತಿತ್ತು. ಅವರು ದೇಶದ ಸ್ವಾತಂತ್ರ್ಯದ

ಜೊತೆ ಜೊತೆಗೆ ಸಮಾಜದ ಅನಿಷ್ಟ ಪದ್ಧತಿಗಳ ಬಗ್ಗೆಯೂ ಮರುಕ ಪಟ್ಟಿದ್ದರು. ಸಮಾನತೆಯ ಸಮಾಜಕ್ಕಾಗಿ ಹಂಬಲಿಸಿ ಅಸ್ಪೃಶ್ಯತೆ ನಿವಾರಣೆಗಾಗಿ ಹಲವು ವಿಧಾಯಕ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಅವುಗಳ ಅನುಷ್ಠಾನಕ್ಕಾಗಿ ಇಡೀ ದೇಶವೇ ಅವರನ್ನು ಬೆಂಬಲಿಸಿತು. ಸದಾಕಾಲ ಒಳ್ಳೆಯದಕ್ಕಾಗಿಯೇ ಹಂಬಲಿಸುತ್ತಿದ್ದ ಅಳವಂಡಿ ನೆಲದ ದೇಶಪ್ರೇಮಿಗಳು ಅಳವಂಡಿಯಲ್ಲಿ ಬಹು ಪಯುಕ್ತ ವಿಧಾಯಕ ಕಾರ್ಯಕ್ರಮಗಳನ್ನು ಆಚರಣೆಗೆ ತಂದರು.

ಗಾಂಧೀಜಿಯವರು ಹಿಂದೂ ಸಮಾಜದಲ್ಲಿದ್ದ ಹಲವಾರು ಅನಿಷ್ಟ ಪದ್ಧತಿಗಳನ್ನು ಮೊದಲು ಹೋಗಲಾಡಿಸಿ. ಹರಿಜನರನ್ನು ಕೂಡ ಗೌರವದಿಂದ ಕಾಣುವ ಹಾಗೂ ಅವರಲ್ಲಿ ರಾಷ್ಟ್ರಭಕ್ತಿಯನ್ನು ಬಿತ್ತುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇವು ಸ್ವಾತಂತ್ರ್ಯ ಹೋರಾಟದಲ್ಲಿ 'ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ'ಗಳೆಂದೇ ಪ್ರಸಿದ್ಧಿಯಾಗಿವೆ.

ಪ್ರಮುಖವಾಗಿ ಹರಿಜನೋದ್ಧಾರದಲ್ಲಿ ಬಾವಿ, ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ಕೊಡುವುದಾಗಿತ್ತು. ಅಳವಂಡಿಯ ಸಿದ್ಧೇಶ್ವರ ಮಠದಲ್ಲಿ ಹರಿಜನರಿಗೆ ಪ್ರವೇಶವಿತ್ತು, ಅವರನ್ನು ಗೌರವದಿಂದ ಕಾಣಲಾಗುತ್ತಿತ್ತು. ಶಿವಮೂರ್ತಿ ಸ್ವಾಮಿಗಳು ಇದರ ಹರಿಕಾರರಾಗಿದ್ದರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು. ಸ್ವಚ್ಛತಾ ಬದುಕನ್ನು ಕಲ್ಪಿಸುವುದು. ಗುಡಿ ಕೈಗಾರಿಕೆಗಳನ್ನು ಬೆಳೆಸುವುದು. ಸ್ವದೇಶಿ ವಸ್ತುಗಳ ಬಳಕೆ, ಪರದೇಶಿ ವಸ್ತ್ರ ಬಹಿಷ್ಕಾರ, ಕಾಯ್ದೆ ಭಂಗ ಚಳುವಳಿ ಮುಂತಾದ ಹಲವಾರು ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಗಾಂಧೀಜಿಯವರು ದೇಶಾದ್ಯಂತ ಹಮ್ಮಿಕೊಂಡಿದ್ದರು. ಈ ಎಲ್ಲ ಸುಧಾರಣಾ ಕಾರ್ಯಕ್ರಮಗಳಿಗೆ ಅಳವಂಡಿಯು ಉತ್ತಮವಾಗಿ ಸ್ಪಂದಿಸಿತು. ಅಳವಂಡಿಯಲ್ಲಿ ಬೆಳೆದಿದ್ದ ಅಬಕಾರಿ ಹರಾಜಿಗಿದ್ದ ಈಚಲ ಗಿಡಗಳನ್ನು ಕಡಿದು ಹಾಕಿ ನಾಶಪಡಿಸಿದರು.

ಹೀಗೆ ಅಳವಂಡಿಯು ಸಾಮಾಜಿಕ ಸುಧಾರಣೆಯ ಚಳುವಳಿಯ ಜೊತೆ ಜೊತೆಗೆ ಸ್ವಾತಂತ್ರ್ಯದ ಚಳುವಳಿಯು ಸಮ್ಮಿಲನಗೊಂಡು ಮಹಾತ್ಮ ಗಾಂಧೀಜಿಯವರ ಕೈ ಬಲಪಡಿಸಿತು. ಅಳವಂಡಿಯ ಈ ಎಲ್ಲ ಹೋರಾಟಗಳ ಕರ್ತೃ ಶಿವಮೂರ್ತಿ ಸ್ವಾಮಿ ಅಳವಂಡಿಯವರೇ ಆಗಿದ್ದರು.



**ವಂದೇ ಮಾತರಂ ಚಳುವಳಿ :**

೧೯೩೮ ಇಸವಿಯು ಹೈದರಾಬಾದ್ ಜನತೆಗೆ ಅದರಲ್ಲೂ ಬಹುಸಂಖ್ಯಾತ ಹಿಂದೂಗಳಿಗೆ ನಿರಾಶಾದಾಯಕವಾಗಿತ್ತು, ಏಕೆಂದರೆ ಈ ವರ್ಷ ನಿಜಾಮರ ಸಿಂಹಾಸನದ ರಜತ ಮಹೋತ್ಸವ ಆಚರಣೆ ಆರಂಭವಾಯಿತು. ಹಿಂದೂ ನಾಗರಿಕ ಸಂಸ್ಥಾನ, ಹೈದರಾಬಾದ್ ರಾಜ್ಯ ಕಾಂಗ್ರೆಸ್, ಆರ್ಯಸಮಾಜ, ಪ್ರಜಾ ಮಂಡಲಗಳು, ಹಿಂದೂ ಮಹಾಸಭಾ ಮೊದಲಾದ ಅನೇಕ ಸಂಘ–ಸಂಸ್ಥೆಗಳಿಂದ ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಯುತ್ತಿದ್ದರೆ ಅತ್ತ ಕಡೆ ನಿಜಾಮನ ಕ್ರೂರ ಆಡಳಿತಕ್ಕೆ ಇಡೀ ಪ್ರಾಂತ್ಯ ನಲುಗಿ ಹೋಗಿತ್ತು. ಆರ್ಯ ಸಮಾಜದ ಸದಸ್ಯರ ನ್ಯಾಯಬದ್ಧವಾದ ಬೇಡಿಕೆಗಳನ್ನು ನಿಜಾಮರು ತಿರಸ್ಕರಿಸಿದ ಕಾರಣಕ್ಕಾಗಿ ಜನರು ಹೋರಾಟಕ್ಕೆ ಇಳಿದಿದ್ದರು. ೧೯೩೭ರಲ್ಲಿ ನವಾಬನು ಸಿಂಹಾಸನವೇರಿ ೨೬ ವರ್ಷವಾದ ಈ ಕಾರಣಕ್ಕಾಗಿ ಜನರು 'ವಂದೇ ಮಾತರಂ' ಹಾಡನ್ನು ಹಬ್ಬದ ಉತ್ಸವಗಳಲ್ಲಿ ಹಾಡುವಂತಿರಲಿಲ್ಲ. ವಂದೇ ಮಾತರಂ ಚಳುವಳಿಗೆ ನಿಜಾಮನು ಮತೀಯ ಬಣ್ಣ ಬಳಿಯುವುದರೊಂದಿಗೆ, ಸ್ವದೇಶಿ ಚಳುವಳಿ ಮತ್ತು ವಿದೇಶಿ ವಸ್ತು ವಿರೋಧಿ ಚಳುವಳಿಗಳನ್ನು ವಿರೋಧಿಸಿದನು. ವಂದೇ ಮಾತರಂ ಚಳುವಳಿಗೆ ಗುಲ್ಬರ್ಗ ಪ್ರಮುಖ ವಿದ್ಯಾರ್ಥಿ ಮುಖಂಡರುಗಳು ಹೋರಾಟಕ್ಕಿಳಿದರು.
ಕೊಪ್ಪಳ ಭಾಗದ ಅಳವಂಡಿ ಗ್ರಾಮದ ಶಿವಮೂರ್ತಿ ಸ್ವಾಮಿ, ಕೊಪ್ಪಳದ ಬಸವಂತರಾವ್ ಕಾಟ್ರಹಳ್ಳಿ ಮೊದಲಾದವರು ಚಳುವಳಿಯಲ್ಲಿ ಭಾಗವಹಿಸಿ, ದೇಶಭಕ್ತಿಯನ್ನು ಮೆರದಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಇದು ಒಂದು ಮೈಲಿಗಲ್ಲು ಎಂದೇ ಪರಿಗಣಿಸಬಹುದು.

'ವಂದೇ ಮಾತರಂ' ಹಾಡಿ ಚಳುವಳಿಯ ನಾಯಕತ್ವ ವಹಿಸಿದ್ದ ಶಿವಮೂರ್ತಿ ಸ್ವಾಮಿ ಅಳವಂಡಿವರನ್ನು ಮತ್ತು ಕೊಪ್ಪಳದ ಬಸವಂತರಾವ ಕಾಟ್ರಳ್ಳಿಯವರನ್ನು ಉಸ್ಮಾನಿಯಾ ವಿಶ್ವ ವಿದ್ಯಾಲಯದಿಂದ ಮತ್ತು ಇಟಗಿ ವಿರೂಪಾಕ್ಷಯ್ಯ ಹಿರೇಮಠ, ವೀರಪ್ಪ ಮೆಣಸಿನಕಾಯಿ ಕೊಪ್ಪಳ, ಶಂಕರಪ್ಪ ಬಂಗಾರಶೆಟ್ಟರ್ ಕೊಪ್ಪಳ ಮೊದಲಾದವರನ್ನು ಕೊಪ್ಪಳ ಉಸ್ಮಾನಿಯಾ ಹೈಸ್ಕೂಲಿನಿಂದ ಉಚ್ಚಾಟಿಸಲಾಯಿತು. ಇವರೆಲ್ಲ ಕೊಪ್ಪಳವನ್ನು ಕೇಂದ್ರವಾಗಿಟ್ಟುಕೊಂಡೇ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

**ಚಲೇಜಾವ್ ಚಳುವಳಿ :**

ಅಗಷ್ಟ ೭, ೮ ಮತ್ತು ೯ ರಂದು ಮುಂಬೈ ಅಧಿವೇಶನದಲ್ಲಿ 'ಮಾಡು ಇಲ್ಲವೇ ಮಡಿ' ಘೋಷಣೆಯಾಯಿತು. ಆಗಸ್ಟ್ ೮ ರಂದು ಕಾಂಗ್ರೆಸ್ ನಿರ್ಣಯದಂತೆ 'ಚಲೇಜಾವ್ ಚಳುವಳಿ'ಯನ್ನು ಪ್ರಾರಂಭಿಸಿದರು. ೧೯೪೨ ಆಗಸ್ಟ್ ೧೬ ರಂದು ವಾರ್ಧಾದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆ ನಿರ್ಣಯಿಸಿದಂತೆ ಆಯಾ ಸ್ಥಳೀಯ ನಾಯಕರು ಅಹಿಂಸೆಯ ಮಿತಿಯೊಳಗೆ ಚಲೇಜಾವ್ ಚಳುವಳಿಯನ್ನು ಪ್ರಾರಂಭಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಕೊಪ್ಪಳ ತಾಲೂಕಿನಿಂದ ಜನಾರ್ಧನ್‌ರಾವ್ ದೇಸಾಯಿ, ಕೊಪ್ಪಳದ ನರಸಿಂಗರಾವ್ ಹಂಪಿಕರ್, ಅಳವಂಡಿ ಶಿವಮೂರ್ತಿ ಸ್ವಾಮಿಗಳು ಮೊದಲಾದವರು ಸ್ವಾಮಿ ರಮಾನಂದ ತೀರ್ಥರ ಆದೇಶದಂತೆ ಈ ಭಾಗದಲ್ಲಿ ಹಗಲು–ರಾತ್ರಿಯೆನ್ನದೆ ೧೯೩೯ ರಿಂದ ತಾವು ಬಂಧನವಾಗುವವರೆಗೂ ಪ್ರಚಾರ ಮಾಡುತ್ತಿದ್ದರು.

**೧೯೪೬ ರ ನಾಸಿಕ್ ಅಧಿವೇಶನದಲ್ಲಿ ಶಿವಮೂರ್ತಿ ಸ್ವಾಮಿಗಳು :**

೧೯೪೬ ರಲ್ಲಿ ನಾಸಿಕ್ ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಳವಂಡಿಯ ಶಿವಮೂರ್ತಿ ಸ್ವಾಮಿಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಸರದಾರ ವಲ್ಲಭಬಾಯಿ ಪಟೇಲರು ಇವರನ್ನು ಹೆಸರಿಡಿದು ಕರೆಯುವಷ್ಟರ ಮಟ್ಟಿಗಿನ ಸಲುಗೆ, ಆತ್ಮೀಯತೆ ಇವರಿಬ್ಬರಲ್ಲಿತ್ತು. 'ವಂದೇ ಮಾತರಂ' ಚಳುವಳಿಯಲ್ಲಿ ಭಾಗಿಯಾಗಿ ಸಾಮೂಹಿಕ ಡಿಬಾರ್ ಆಗಿದ್ದ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ನಾಗಪುರದ ಹೈಸ್ಕೂಲಿನಲ್ಲಿ ಈ ವಿದ್ಯಾರ್ಥಿಗಳಿಗೆ ಅವಕಾಶ ಕೊಡಲಾಗಿತ್ತು. ಸರಕಾರದ ಸಂಬಂಧಿತ ಇಲಾಖೆಯವರ ಗಮನಕ್ಕೆ ತರಲು ಶಿವಮೂರ್ತಿ ಸ್ವಾಮಿ ಅಳವಂಡಿಯವರು ವಿದ್ಯಾರ್ಥಿ ದೆಸೆಯಿಂದಲೇ ಪ್ರಯತ್ನಿಸಿದರು.

ನಾಸಿಕ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದಾಗ ಇವರಿಗೆ ಕೇವಲ ೨೪ ವರ್ಷ ವಯಸ್ಸು. ಉರ್ದು ಮತ್ತು ಹಿಂದಿಯ ಪ್ರೌಢಿಮೆಯುಳ್ಳ ಇವರು ಅಂದು ಹೈದರಾಬಾದ್ ಪ್ರಾಂತ್ಯದ ಆಡಳಿತಾತ್ಮಕ ವಿದ್ಯಮಾನಗಳನ್ನು, ನಿಜಾಮನ ಆಡಳಿತ ವೈಖರಿಯನ್ನು, ಕನ್ನಡದ ಸಮಸ್ಯೆಗಳನ್ನು, ದೇಶದ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳ ಕುರಿತಾಗಿ ಆಡಿದ ಪರಿಣಾಮಕಾರಿ ಮಾತುಗಳು ಉತ್ತರ ಭಾರತದ ನಾಯಕರಿಗೆ ಮನದಟ್ಟಾಗುವಂತೆ ಮಾಡಿದ್ದವು. ಇವರ ಮಾತುಗಳಿಗೆ ಸರದಾರ ವಲ್ಲಭಬಾಯಿ ಪಟೇಲರೇ ಮೂಕವಿಸ್ಮಿತರಾಗಿದ್ದರು. ೧೯೪೭ ರಲ್ಲಿ ನಿಜಾಮನು ಭಾರತ ಒಕ್ಕೂಟ ಸೇರುವುದಿಲ್ಲವೆಂದು ತಿಳಿಸಿದಾಗ, ತಮ್ಮ ತಂಡದೊಂದಿಗೆ ಶಿವಮೂರ್ತಿ ಸ್ವಾಮಿಗಳು ಸರದಾರ ಪಟೇಲರನ್ನು ಭೇಟಿಯಾಗಿ ನಿಜಾಮನ ವಿರುದ್ಧ ಹೋರಾಡಲು ಸಿದ್ಧವೆಂದು ತಿಳಿಸಿದಾಗ 'ಏಯ್, ಶಿವಸ್ವಾಮಿ' ಎಂದು ಹೆಸರು ಕರೆದೇ ಸರದಾರರು ಮಾತನಾಡಿಸುವಷ್ಟರ ಮಟ್ಟಿಗೆ ಇವರ ಹೆಸರು ಅವರಲ್ಲಿ ಉಳಿದಿತ್ತು ಎಂದರೆ ಶಿವಮೂರ್ತಿ ಸ್ವಾಮಿಗಳ ಮಾತುಗಳು ಎಷ್ಟು ನಿಖರತೆಯಿಂದ ಕೂಡಿತ್ತು ಎನ್ನುವುದು ತಿಳಿಯುತ್ತದೆ.

**ಭುಗಿಲೆದ್ದ ಹೈದರಾಬಾದ್ ಪ್ರಾಂತ್ಯ**

ಕ್ಯಾಬಿನೆಟ್ ಮಿಷನ್ ಆಗಮನದೊಂದಿಗೆ ಸ್ವಾತಂತ್ರ್ಯದ ಹೊಸ ಉತ್ಸಾಹದಲ್ಲಿ ಭಾರತೀಯರಿರುವಾಗ ರಾಜತಾಂತ್ರಿಕ ಒಪ್ಪಂದಗಳ ಸಂದರ್ಭದಲ್ಲಿ ಹೈದರಾಬಾದ್ ನಿಜಾಮನ ಭಾರತದ ಒಕ್ಕೂಟದಿಂದ ಹೈದರಾಬಾದ್ ಪ್ರಾಂತ್ಯವನ್ನು ಹೊರಗಿಡುವಂತೆ ಹಾಗೂ ಹೈದರಾಬಾದ್ ಸ್ವತಂತ್ರ ರಾಜ್ಯವೆಂದು ಘೋಷಿಸಬೇಕೆಂದು ವಿನಂತಿಯನ್ನು ಮಾಡಿಕೊಂಡನು. ಹೈದರಾಬಾದ್, ಜುನಾಗಡ್ ಮತ್ತು ಕಾಶ್ಮೀರದ ರಾಜ ಹರಿಸಿಂಗ್ ವಿಲೀನತೆಯನ್ನು ವಿರೋಧಿಸಿದರು. ಆಗಸ್ಟ್ ೧೫ ೧೯೪೭ ಭಾರತ ಸ್ವಾತಂತ್ರ್ಯವಾಗುವ ದಿನವೆಂದು ಬ್ರಿಟಿಷ್ ಸರ್ಕಾರವು ಘೋಷಿಸಿತು. ಜುನಾಗಡ ಮತ್ತು ಕಾಶ್ಮೀರದ ವಿಲೀನತೆ ಹೈದರಾಬಾದ್ ಪ್ರಾಂತ್ಯದಷ್ಟು ಜಟಿಲವಾಗಲಿಲ್ಲ. ನಿಜಾಮನ ಭಾರತ ಒಕ್ಕೂಟ ಸೇರದಿರುವ ನಿರ್ಧಾರಕ್ಕೆ ಇಡೀ ಹೈದರಾಬಾದ್ ಪ್ರಾಂತ್ಯ ಭುಗಿಲೆದ್ದಿತು.

**ನಿಜಾಮನ ತಟಸ್ಥ ನೀತಿ : ಘಾಸಿಗೊಂಡ ಜನತೆ**

ನಿಜಾಮನ ತಟಸ್ಥ ನೀತಿಯಿಂದ ಹೈದರಾಬಾದ್ ಸ್ವತಂತ್ರ ರಾಜ್ಯ ಘೋಷಣೆ ಮಾಡಿಕೊಂಡು ಈ ಭಾಗದ ಬಹುಸಂಖ್ಯಾತರ ಮನಸ್ಸುಗಳನ್ನು ಘಾಸಿಗೊಳಿಸಿತು. ದೇವರು ವರವನ್ನು ಕೊಟ್ಟರೂ ಪೂಜಾರಿ ಕೊಡಲಿಲ್ಲವೆಂಬ ನಾಣ್ಣುಡಿಗೆ ನಮ್ಮ ಭಾಗ ಸಾಕ್ಷಿಯಾಯಿತು.

ಸ್ವಾಮಿ ರಮಾನಂದ ತೀರ್ಥರು ಮತ್ತು ಗೆಳೆಯರು ಜನಾಭಿಪ್ರಾಯ ಮೂಡಿಸುತ್ತ 'ಒಕ್ಕೂಟ ಸೇರಿರಿ' ಎನ್ನುವ ಘೋಷಣೆಯೊಂದಿಗೆ ನಿಜಾಮ ಪ್ರಾಂತ್ಯದ ತುಂಬಾ ಹೋರಾಟದ ತೀವ್ರತೆಯನ್ನು ಹೆಚ್ಚಿಸಿದರು.

ಆಗಸ್ಟ್ ೭, ೧೯೪೭ ರಂದು ಕೊಪ್ಪಳ, ಗಂಗಾವತಿಗಳಲ್ಲಿ ನಿಷೇಧದ ನಡುವೆಯೂ ದೇಶಭಕ್ತ ಜನರು ತಂತಿ ಸಂದೇಶಗಳ ಮೂಲಕ, ಗೌಪ್ಯ ಸಭೆಗಳ ಮೂಲಕ ತಮ್ಮ ಹೋರಾಟ ಮುಂದುವರಿಸಿದರು. ಕೊಪ್ಪಳ ವಿಭಾಗದ ವಿದ್ಯಾರ್ಥಿ ನಾಯಕರುಗಳಾದ ಶಿವಮೂರ್ತಿ ಸ್ವಾಮಿ ಅಳವಂಡಿ, ಡಿ.ಆರ್. ವಿಠಲರಾವ್, ರಾಘವೇಂದ್ರ ಕಲ್ಲೂರು ಅವರು ಯಲಬುರ್ಗಿ, ಗಂಗಾವತಿ ಮತ್ತು ಕುಷ್ಟಗಿ ತಾಲ್ಲೂಕುಗಳ ಸ್ನೇಹಿತರೊಂದಿಗೆ ಜೀವದ ಮೇಲಿನ ಆಸೆಯನ್ನು ತೊರೆದು ನಿಜಾಮನ ವಿರುದ್ಧದ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಅಳವಂಡಿಯ ಅನೇಕ ದೇಶಭಕ್ತ ಜನತೆ, ಯುವ ಸಮೂಹ ನಿಜಾಮನ ವಿರುದ್ಧದ ಸಮರದಲ್ಲಿ ಭಾಗಿಯಾದ ದಾಖಲೆಗಳು ಸಿಗುತ್ತವೆ.

**ನಿಷೇಧದ ನಡುವೆಯೂ ಅಳವಂಡಿ ಭಾಗಗಳಲ್ಲಿ ಸ್ವಾತಂತ್ರ್ಯದ ಆಚರಣೆ :**

ಆಗಸ್ಟ್ ೧೫ ರಂದು ಬೆಳಿಗ್ಗೆ ಪ್ರಧಾನಮಂತ್ರಿ ಪಂಡಿತ್ ಜವಾಹರ್ ಲಾಲ್ ನೆಹರೂ ಐತಿಹಾಸಿಕ ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದರು. ಆದರೆ ಹೈದರಾಬಾದ್ ಪ್ರಾಂತ್ಯ ಇನ್ನೂ ನಿಜಾಮನ ಹಿಡಿತಕ್ಕೆ ಸಿಕ್ಕು ನಲುಗುತಿತ್ತು. ಹೈದರಾಬಾದ್ ಪ್ರಾಂತ್ಯದಲ್ಲಿ ಭಾರತ ಸ್ವಾತಂತ್ರ್ಯಗೊಂಡ ಸಂತೋಷಕ್ಕಾಗಿ ರಾಷ್ಟ್ರಾಭಿಮಾನವನ್ನು ಹಾಗೂ ದೇಶಭಕ್ತಿಯನ್ನು ಪ್ರದರ್ಶಿಸಲು ಅಲ್ಲಿನ ಜನತೆಯು ಭಾರತದ ಧ್ವಜವನ್ನು ಹಾರಿಸುವುದರ ಮೂಲಕ ಸ್ವಾತಂತ್ರ್ಯದ ಖುಷಿಯನ್ನು ಆಚರಿಸುತ್ತಿದ್ದರು. ಇದು ನಿಜಾಮನಿಗೆ ಸಹಿಸಲಾಗಲಿಲ್ಲ. ರಾಷ್ಟ್ರಧ್ವಜವನ್ನು ಹಾರಿಸಿದವರ ಮೇಲೆ ರಜಾಕಾರರು ದಾಳಿ ಮಾಡುತ್ತಿದ್ದರು. ಅವರನ್ನು ಬಂಧಿಸಿದರು.

ವಿದ್ಯಾರ್ಥಿ ನಾಯಕರಾದ ಅಳವಂಡಿ ಶಿವಮೂರ್ತಿ ಸ್ವಾಮಿ, ಕನಕಗಿರಿಯ ಜಯತೀರ್ಥ ರಾಜಪುರೋಹಿತರು ಕೊಪ್ಪಳದ ವಿಠಲರಾವ್, ರಾಘವೇಂದ್ರ ಕಲ್ಲೂರು ಮುಂತಾದವರು ಇದರಲ್ಲಿ ಪಾಲ್ಗೊಂಡು ಸತ್ಯಾಗ್ರಹಕ್ಕೆ ಕರೆ ಕೊಟ್ಟರು. ಕೊಪ್ಪಳದಲ್ಲಿ ಪೊಲೀಸರ ಕಟ್ಟೆಚ್ಚರದ ಮಧ್ಯ ಆಗಸ್ಟ್ ೧೫ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ತರುಣ ಸಂಘದವರು, ಸ್ವಾತಂತ್ರ್ಯ ಹೋರಾಟಗಾರರು ಧ್ವಜಾರೋಹಣವನ್ನು ಮಾಡಲೇಬೇಕೆಂದು ಮುಕ್ತವಾಗಿ ಚರ್ಚಿಸಿ, ಹಿರಿಯರ ಹೇಳಿಕೆಯಂತೆ ಕೊಪ್ಪಳದ ಕಿಲ್ಲೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯಕ್ರಮವನ್ನು ಹಾಕಿಕೊಂಡರು.



ಆದರೆ ರಾತ್ರಿಯಲ್ಲಿ ಪೊಲೀಸರ ಗಸ್ತು ಸರ್ಪ ಕಾವಲು, ಎದೆ ಝಲ್ ಎನಿಸುವಂತಿತ್ತು. ಹೋರಾಟಗಾರರ ಮುಖ್ಯ ಘೋಷಣೆ ಎಂದರೆ 'ನಿಜಾಮನು ಅಧಿಕಾರ ತ್ಯಾಗ ಮಾಡಲು ಭಾರತದಲ್ಲಿ ಹೈದರಾಬಾದ ಪ್ರಾಂತ್ಯ ವಿಲೀನವಾಗಲಿ' ಎಂದು ರಾಷ್ಟ್ರೀಯ ನಾಯಕರ ಫೋಟೋ ಹಿಡಿದು, ಗಾಂಧಿ ಟೋಪಿ ಹಾಕಿಕೊಂಡು 'ಮಹಾತ್ಮ ಗಾಂಧೀಜಿ ಕೀ ಜೈ'ಎಂದು ಘೋಷಣೆ ಮಾಡುತ್ತಾ ಸಾಗುತ್ತಿದ್ದರು.

ಅಳವಂಡಿ ಸಮೀಪದ ಕಾತರಕಿ ಗ್ರಾಮದಲ್ಲಿ ಶಂಕ್ರಪ್ಪ ಬಂಗಾರಶೆಟ್ಟರ್, ಹಗರಿ ಕೃಷ್ಣಪ್ಪ ಜ್ಞಾನಮೋಟೆ ಹಾಗೂ ಅವರ ಸ್ನೇಹಿತರು ಕೂಡಿ ಧ್ವಜ ಹಾರಿಸಿ ಸತ್ಯಾಗ್ರಹ ಮಾಡಿದರು. ಅಳವಂಡಿ ಗ್ರಾಮದ ಸಮೀಪವಿರುವ ಕವಲೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ತಿರುಮಲರಾವ್ ದೇಸಾಯಿ ಮತ್ತು ತುಳಸಿರಾಮ್ ಗೆದಗೇರಿ ಇವರು ಭಾಷಣ ಮಾಡಿದ ಆಪಾದನೆಯ ಮೇಲೆ ಕವಲೂರಿನ ಅಲಿಪುರ ಚನ್ನಬಸವನಗೌಡ, ಮಲ್ಲ ಬಸವನಗೌಡ, ನರಸಪ್ಪ ದ್ಯಾಂಪುರ ಇವರನ್ನು ಬಂಧಿಸಲಾಯಿತು.

**ಹೋರಾಟದ ಮುಖ್ಯ ವೇದಿಕೆಯಾಗಿ ಅಳವಂಡಿ :**

ಜಮೀನ್ದಾರ ವೀರಪ್ಪ ದೇಸಾಯಿಯವರ ೧೮೮೯ ರ ಮೊದಲ ಸಶಸ್ತ್ರ ಬಂಡಾಯದಿಂದ ಹಿಡಿದು, ಗಾಂಧಿಯುಗದ ಖಾದಿ ಚಳುವಳಿ, ಅಧಿವೇಶನಗಳಲ್ಲಿ ಭಾಗಿ, ವಿಧಾಯಕ ಕಾರ್ಯಕ್ರಮಗಳ ಅನುಷ್ಠಾನ, ವಂದೇ ಮಾತರಂ ಚಳುವಳಿ, ಚಲೇಜಾವ್ ಚಳುವಳಿ, ವಾಚನಾಲಯಗಳ ಸ್ಥಾಪನೆ ಹೀಗೆ ಸ್ವಾತಂತ್ರ್ಯ ಹೋರಾಟದ ವಿವಿಧ ನೆಲೆಗಳ ಚಳುವಳಿಗಳಲ್ಲಿ ಅಳವಂಡಿಯ ನೆಲ ಸಕ್ರಿಯವಾಗಿ ಭಾಗವಹಿಸಿದೆ. ಈ ಭಾಗದ ಹೋರಾಟಗಾರರ ಕೆಚ್ಚೆದೆಯ ನಿಲುವುಗಳು ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿವೆ. ೧೯೪೭ ರ ನಂತರ ನಿಜಾಮ ಭಾರತ ಒಕ್ಕೂಟಕ್ಕೆ ಸೇರಲು ಒಪ್ಪದಿದ್ದಾಗ 'ವಿಮೋಚನಾ' ಚಳುವಳಿಗೆ ಇಡೀ

ಹೈದರಾಬಾದ್ ಪ್ರಾಂತ್ಯ ಧುಮುಕಿತು. ಈ ವಿಮೋಚನಾ ಹೋರಾಟದಲ್ಲಿಯೂ ಅಳವಂಡಿ ಭಾಗ ಮುಖ್ಯ ವೇದಿಕೆಯಾಯಿತು.

**ರಜಾಕಾರರ ಹಾವಳಿ : ಗಡಿಭಾಗದ ಪ್ರದೇಶಗಳ ಮೇಲೆ ನಿಗಾ :**

ನಿಜಾಮನ ದಿಕ್ಕು ತಪ್ಪಿಸಿ ತನ್ನದೇ ಸ್ವಾರ್ಥ, ನಿರಂಕುಶ ಆಡಳಿತದ ಮೂಲಕ ನಿಜಾಮನ ಆಪ್ತರಲ್ಲೊಬ್ಬನಾದ ಖಾಸಿಂ ರಜವಿ ಎಂಬ ಚಾಣಾಕ್ಷ ಮಾತುಗಳ ವಕೀಲ 'ರಜಾಕಾರರು' ಎಂಬ ಪಡೆಯನ್ನು ಸೃಷ್ಟಿಸುತ್ತಾನೆ. ಮೇಲು ನೋಟಕ್ಕೆ ಇದು 'ಶಾಂತಿಧೂತ'ರ ಪಡೆ. ಆಂತರ್ಯದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯದ, ಶ್ರೀಮಂತರ ಮೇಲಿನ ದರ್ಪಕ್ಕೆಂದು 'ಕಾಟೋ–ಲೂಟೋ–ಬಾಟೋ' ಮಂತ್ರದ ಭಯೋತ್ಪಾದನೆಯ ಕೆಲಸ ಮಾಡುವ ಕೆಲಸದವರು. ಪಾಕಿಸ್ತಾನವನ್ನು ಸೇರುವ, ಭಾರತದ ವಿರುದ್ಧ ಯುದ್ಧ ಮಾಡುವ, ಗೋವಾ ವಶಪಡಿಸಿಕೊಂಡು, ಧಾರವಾಡ–ಗದಗ ಭಾಗಗಳ ಮೇಲೆ ದಾಳಿ ಮಾಡಿ ಸಮುದ್ರ ತೀರ ಹೊಂದುವ ಹೀಗೆ ಹಲವು ವಿಕೃತ ಉದ್ದೇಶಗಳಿಗಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಮನೆ–ಮನೆಗೆ ನುಗ್ಗಿ ದರೋಡೆ, ಅತ್ಯಾಚಾರ ಆರಂಭವಾದವು. ಮಾನ–ಪ್ರಾಣ ಉಳಿಸಿಕೊಳ್ಳಲು ಇಲ್ಲಿನ ಜನತೆ ಗಡಿಗೆ ಹೊಂದಿಕೊಂಡ ಮುಂಬೈ, ಮದ್ರಾಸ್ ಪ್ರಾಂತ್ಯದ ಹಳ್ಳಿಗಳಿಗೆ ಹೋದರು.

ರಜಾಕಾರರ ಕ್ರೂರತ್ವಕ್ಕೆ ಇಡೀ ಜನತೆ ಬೆಚ್ಚಿ ಬಿದ್ದಿತು. ಮತಾಂತರ, ಲೂಟಿ, ದರೋಡೆ, ಅತ್ಯಾಚಾರ, ಕೊಲೆ ಇವುಗಳೇ ರಜಾಕಾರರ ಮುಖ್ಯ ಉದ್ದೇಶವಾಗಿದ್ದವು. ರುಂಡಗಳನ್ನು ತೂಗು ಹಾಕಿ ಕ್ರೂರತ್ವ ಮೆರೆದ ಉದಾಹರಣೆಗಳನ್ನು ರಾಯಚೂರು ಭಾಗದ ಕಡೆ ದಾಖಲಾಗಿವೆ. ಇವರ ಗುರಿ ಹಿಂದೂಗಳೇ ಆಗಿದ್ದರೂ, ಮುಸ್ಲಿಮರೆಲ್ಲರೂ ನಿಜಾಮನನ್ನು ಬೆಂಬಲಿಸಿರಲಿಲ್ಲ. 'ಇಮ್‌ರೋಜ್' ಪತ್ರಿಕೆಯ ಮುಸ್ಲಿಂ ಸಂಪಾದಕ ಶೋಯೇಬ್ ಉಲ್ಲಾ ಖಾನ್‌ರನ್ನು ಹಾಡುಹಗಲೇ ರಸ್ತೆಯಲ್ಲಿ ಬೆಂಕಿ ಹಚ್ಚಿ ಕೊಂದರು. ಅದೆಷ್ಟೋ ಸಂದರ್ಭಗಳಲ್ಲಿ ಹಿಂದೂಗಳ ಪ್ರಾಣವನ್ನು ಮುಸ್ಲಿಮರು ಉಳಿಸಿದ್ದಾರೆ. ಧರ್ಮಗಳ ಕಾರಣದಿಂದ ಬೆಂಕಿ ಹಚ್ಚಬೇಕೆಂದಿದ್ದ ಖಾಸಿಂ ರಜವಿಯ ಕೆಲಸ ಕೈಗೂಡಲು ಇಲ್ಲಿನ ಹಿಂದೂ–ಮುಸ್ಲಿಂ ಭಾವೈಕ್ಯತೆ ಅವಕಾಶ ಕೊಡಲಿಲ್ಲ.



ರಜಾಕಾರರಿಗೆ ಗಡಿ ಭಾಗಗಳೇ ಟಾರ್ಗೆಟ್ ಆಗಿದ್ದವು. ತಮ್ಮ ಗಡಿಯಾಚೆಗೂ ಹೋಗಿ ಮುಂಬೈ, ಮದ್ರಾಸು ಪ್ರಾಂತ್ಯಗಳ ಹಳ್ಳಿಗಳ ಮೇಲೆ ದಾಳಿ ಮಾಡಿದ ಉದಾಹರಣೆಗಳಿವೆ. ಗಡಿ ಭಾಗದಲ್ಲಿ ತಮ್ಮ ವಿರುದ್ಧ ಹೋರಾಟಗಳು ತೀವ್ರಗತಿಯಲ್ಲಿ ಆಗುತ್ತಿರುವುದು ಗೊತ್ತಿದ್ದ ಇವರಿಗೆ ಅಳವಂಡಿ ಸೇರಿದಂತೆ ಹಲವು ಗಡಿ ಭಾಗದ ಹಳ್ಳಿಗಳ ಮೇಲೆ ನಿಗಾ ಇಟ್ಟಿದ್ದರು.

**ಮಹಾನುಭಾವ ಶಿವಮೂರ್ತಿ ಸ್ವಾಮಿ ಅಳವಂಡಿ :**

ನಿಜಾಮ ಸಂಸ್ಥಾನದ ಗಡಿಯಿಂದ ಸುಮಾರು ೪ ರಿಂದ ೫ ಕಿ.ಮೀ. ದೂರದಲ್ಲಿ ರಾಜ್ಯ ಕ್ರಿಯಾ ಸಮಿತಿಯ ನಿರ್ದೇಶನದ ಅನುಗುಣವಾಗಿ ಸುಮಾರು ೧೦೦ ಶಿಬಿರಗಳನ್ನು ಸ್ಥಾಪಿಸಿ, ನಿಜಾಮನ ವಿರುದ್ಧ ಹೋರಾಟವನ್ನು ಹೆಚ್ಚಿಸುವ ಕೆಲಸ ನಡೆಯಿತು. ಇವುಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳಾದ ಬಳ್ಳಾರಿ, ಧಾರವಾಡ, ಬಿಜಾಪುರ, ಸೊಲ್ಲಾಪುರದ ಗಡಿಗಳಲ್ಲಿಯೇ ೧೮ ಪ್ರಧಾನ ಶಿಬಿರಗಳು ಮತ್ತು ೧೨ ಉಪ ಶಿಬಿರಗಳು ಸ್ಥಾಪನೆಯಾದವು.

ರಾಯಚೂರು ಜಿಲ್ಲೆಗೆ ಹೊಂದಿಕೊಂಡ ಪ್ರಧಾನ ಶಿಬಿರಗಳೆಂದರೆ ತುಂಗಭದ್ರಾ ಶಿಬಿರ, ಮುಂಡರಗಿ ಶಿಬಿರ, ಗಜೇಂದ್ರಗಡ ಶಿಬಿರ, ಕಂಪ್ಲಿ ಶಿಬಿರ, ಶಿರಗುಪ್ಪ ಶಿಬಿರ ಮತ್ತು ಆದೋನಿ ಶಿಬಿರ.

ಇವುಗಳಲ್ಲಿ ಬರುವ ಮುಂಡರಗಿ ಶಿಬಿರದ ಶಿಬಿರಾಧಿಪತಿ, ಶಿಬಿರದ ದಂಡನಾಯಕರಂತಿದ್ದವರೇ ಶಿವಮೂರ್ತಿ ಸ್ವಾಮಿ ಅಳವಂಡಿಯವರು. ಸ್ವತಃ ಸರದಾರ ವಲ್ಲಭಭಾಯಿ ಪಟೇಲರೇ 'ನಿಮ್ಮ ಸಮೀಪದ ಗಡಿ ಶಿಬಿರದ ನಾಯಕತ್ವ ವಹಿಸು' ಎಂದು ಇವರಿಗೆ ಹೇಳಿದ್ದರು. ಸ್ವಾತಂತ್ರ್ಯ ಹೋರಾಟ ಮತ್ತು ವಿಮೋಚನಾ ಹೋರಾಟಗಳ ಬಹುಮೌಲ್ಯಯುತ ವ್ಯಕ್ತಿ ಇವರಾಗಿದ್ದರು. ತ್ಯಾಗ ಮತ್ತು ಧೈರ್ಯ ಇವರ ವ್ಯಕ್ತಿತ್ವದ ಎರಡು ಮುಖಗಳು.

**ಸ್ವಾತಂತ್ರ್ಯ ಹೋರಾಟದಲ್ಲಿ ಅಳವಂಡಿ ಸಿದ್ಧೇಶ್ವರ ಮಠದ ಪಾತ್ರ :**

ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಸಂಸ್ಥಾನ ಮಠದ ಕರ್ತೃ ಗದ್ದುಗೆ ಶ್ರೀ ಸಿದ್ದೇಶ್ವರ ಸ್ವಾಮಿಗಳವರದು. ಇದು ವಿರಕ್ತ ಮಠವಲ್ಲ. ಸಂಸಾರಿಗಳ ಮಠ. ಈ ವಂಶಸ್ಥರು ಇಂದಿಗೂ ವಾಸಿಸುತ್ತಿದ್ದಾರೆ. ಶ್ರೀಮಂತಿಕೆಯಿಂದ ಕೂಡಿರುವ

ಮಠ ಇದು. ಅಳವಂಡಿ ಶಿವಮೂರ್ತಿ ಸ್ವಾಮಿಗಳು ಈ ಕುಟುಂಬದ ಮುಖ್ಯಸ್ಥರಾಗಿ ಇದ್ದವರು. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ವಿಮೋಚನೆಯ ಹೋರಾಟದಲ್ಲಿ ಇವರ ಪಾತ್ರ ಬಹಳಷ್ಟು ದೊಡ್ಡದು. ಇವರ ತಮ್ಮ ಕರಿಶಿದ್ಧ ಸ್ವಾಮಿಗಳು ಇವರೀರ್ವರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಈ ನೆಲಕ್ಕೆ ಮಹದುಪಕಾರ ಮಾಡಿದರು. ಗಾಂಧೀಜಿಯವರ ತತ್ವ ಆದರ್ಶಗಳನ್ನು ಚಾಚು ತಪ್ಪದೆ ಪಾಲಿಸಿದ ಶಿವಮೂರ್ತಿಸ್ವಾಮಿಗಳು ತಮ್ಮ ತಾಯಿಯವರ ಬಂಗಾರದ ಒಡವೆಗಳನ್ನು ಅಡವಿಟ್ಟು 'ಚರಕಾ ಸಂಘ'ವನ್ನು ಸ್ಥಾಪಿಸಿದ್ದರು. ಸರ್ದಾರ್ ವಲ್ಲಭ ಭಾಯಿ ಪಟೇಲರು ಶಿವಮೂರ್ತಿ ಸ್ವಾಮಿಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು.

ಸಿದ್ಧೇಶ್ವರ ಮಠವು ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರದಂತೆ ಇತ್ತು. ಈ ಮಠದಲ್ಲಿ ಹರಿಜನರಿಗೂ ಪ್ರವೇಶವಿತ್ತು. ಅವರನ್ನು ಗೌರವದಿಂದ ಕಾಣಲಾಗುತ್ತಿತ್ತು. ದೇಶದ ಅವಶ್ಯಕತೆಗೆ ಸ್ಪಂದಿಸಿದ, ನೆಲದ ನೋವಿಗೆ ಧ್ವನಿಯಾದ ಮಠವೇ ಸಿದ್ಧೇಶ್ವರ ಮಠ.

ಅಳವಂಡಿಯನ್ನು ಲೂಟಿ ಮಾಡಿದ ರಜಾಕಾರರು ಮಠವನ್ನು ವಶಪಡಿಸಿಕೊಂಡು ತಮ್ಮ ವಾಸಸ್ಥಳವಾಗಿ ಮಾಡಿ ಕೊಳ್ಳುತ್ತಾರೆ. ಮಠದ ತಾಡೋಲೆಗಳನ್ನು ನಾಶಮಾಡುತ್ತಾರೆ. ವೀರಭದ್ರೇಶ್ವರ ಮೂರ್ತಿಯನ್ನು ಹಾಳು ಮಾಡುತ್ತಾರೆ. ಆದರೆ ಕರ್ತೃಗದ್ದುಗೆ ಸಿದ್ಧೇಶ್ವರ ಮೂರ್ತಿಯ ಹತ್ತಿರ ಹೋಗುವುದಿಲ್ಲ. ಸ್ಥಳೀಯ ಮುಸಲ್ಮಾನರು ಇದೊಂದು ಜಾಗೃತ ಆಧ್ಯಾತ್ಮಿಕ ಕೇಂದ್ರವಾಗಿದ್ದು ಮಠದ ಪಾವಿತ್ರ್ಯತೆಯನ್ನು ರಕ್ಷಿಸುವಂತೆ, ಕರ್ತೃಗದ್ದುಗೆಯ ಹತ್ತಿರ ಹೋಗದಿರುವಂತೆ ಕೇಳಿಕೊಳ್ಳುತ್ತಾರೆ. ರಜಾಕಾರರು ಕರ್ತೃಗದ್ದಿಗೆಯ ಹತ್ತಿರ ಹೋಗದೇ ಇದ್ದರೂ ಮಠದಲ್ಲುಳಿದುಕೊಂಡು ಹಿಂದೂಗಳ ಭಾವನೆಗೆ ಧಕ್ಕೆ ತರುತ್ತಾರೆ. ಕಾಕತಾಳೀಯವೆಂಬಂತೆ ರಜಾಕಾರರ ಕಣ್ಣುಗಳು ಕಾಣದಂತಾಗಿ ಅವರು ಉರುಳಿ ಬೀಳತೊಡಗುತ್ತಾರೆ. ಸಿದ್ಧೇಶ್ವರ ಮಠದ ಶಾಪ ರಜಾಕಾರರಿಗೆ ತಟ್ಟಿತು ಎಂಬ ಧಾರ್ಮಿಕ ಭಾವನೆ ಅಲ್ಲಿ ಮೊಳಗುತ್ತದೆ. ಇದರಿಂದ ಹೆದರಿದ ರಜಾಕಾರರು ಮಠದಿಂದ ತೆರಳುತ್ತಾರೆ.



## ಭೂಗತ ಚಟುವಟಿಕೆಗಳು :

## ಅಳವಂಡಿ ಲೂಟಿ – ಸಿದ್ದೇಶ್ವರ ಮಠದ ಆಕ್ರಮಣ :

ಶಿವಮೂರ್ತಿ ಸ್ವಾಮಿಗಳು ಮುಂಡರಗಿ ಶಿಬಿರದ ಭೂಗತ ಚಟುವಟಿಕೆಗಳ ನೇತಾರರು. ಸ್ವಾತಂತ್ರ್ಯ ಹೋರಾಟದ ಮಹಾಶಕ್ತಿ. ಅವರ ತಮ್ಮ ಕರಿಶಿದ್ಧ ಸ್ವಾಮಿಗಳು ಕೂಡಾ ಸ್ವಾತಂತ್ರ್ಯ ಹೋರಾಟಗಾರರು. ಇಲ್ಲಿಯ ಪವಿತ್ರ ಮಠವಾದ ಅಳವಂಡಿ ಸಿದ್ದೇಶ್ವರ ಗದ್ದುಗೆಯ ವಂಶಸ್ಥರು ಇವರು. ಇಬ್ಬರೂ ವಿಮೋಚನೆ ಹೋರಾಟದಲ್ಲಿ ನಿರತರಾಗಿದ್ದ ಕಾರಣ, ಹೋರಾಟವನ್ನು ಬಗ್ಗು ಬಡಿಯಲು ಗಡಿ ಭಾಗ ಅಳವಂಡಿಯ ಮಠದ ಮೇಲೆ ರಜಾಕಾರರು ಆಕ್ರಮಣ ಮಾಡಿದರು. ಇದು ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರವೂ ಆಗಿತ್ತು. ಹೋರಾಟದ ಬಹುಮುಖ್ಯ ಕೇಂದ್ರ ಅಳವಂಡಿ ಎಂದು ರಜಾಕಾರರಿಗೆ ತಿಳಿದಿತ್ತು. ಮುಂಡರಗಿ ಶಿಬಿರದ ಕಾರ್ಯ ಚಟುವಟಿಕೆಗಳು ಈ ಗ್ರಾಮದ ಮೂಲಕವೇ ಜರುಗುತ್ತಿದ್ದವು. ಇಡೀ ಊರನ್ನು ಲೂಟಿ ಮಾಡಿದರು. ಹನುಮರೆಡ್ಡಿ ಎನ್ನುವಾತನನ್ನು ಗುಂಡಿಟ್ಟು ಕೊಲ್ಲಲಾಯಿತು. ಮಹಿಳೆಯರ ಮಾನಹಾನಿ ಮಾಡಿದರು. ಮಠವನ್ನು ತಮ್ಮ ವಶಕ್ಕೆ ಪಡೆದರು. ಮಠದ ಮುಖ್ಯ ಕಾಗದ ಪತ್ರಗಳನ್ನು ಸುಟ್ಟರು. ವೀರಭದ್ರೇಶ್ವರ ಮೂರ್ತಿಯನ್ನು ಒಡೆದು ಹಾಕಿದರು. ಮಠವನ್ನು ತಮ್ಮ ಕ್ಯಾಂಪ್ ಆಗಿ ಪರಿವರ್ತಿಸಿ ಪಾವಿತ್ರ್ಯತೆಯನ್ನು ಹಾಳು ಮಾಡಿದರು. ಸ್ಥಳೀಯ ಮುಸಲ್ಮಾನರು ಕರ್ತೃ ಗದ್ದುಗೆ ಮರುಳ ಸಿದ್ದೇಶ್ವರ ಗದ್ದುಗೆಯನ್ನು ಪ್ರವೇಶಿಸಬಾರದು, ಅದೊಂದು ಆಧ್ಯಾತ್ಮಿಕ ಕೇಂದ್ರವೆಂದು ಪಠಾಣರಿಗೆ ಮನವರಿಕೆ ಮಾಡಿಕೊಟ್ಟರೆಂದು ತಿಳಿದು ಬರುತ್ತದೆ. ಈ ಜಾಗೃತ ಕೇಂದ್ರಕ್ಕೆ ಕಾಲಿಟ್ಟರೆ ಅನಾಹುತವಾಗುತ್ತದೆ ಎಂದು ತಿಳಿಸಿದರು. ಆದಕಾರಣ ಅವರು ಕರ್ತು ಗದ್ದುಗೆಯನ್ನು ಪ್ರವೇಶಿಸಲಿಲ್ಲ. ಕಾಕತಾಳೀಯವೆಂಬಂತೆ ಬರುಬರುತ್ತ ಪಠಾಣರ ಕಣ್ಣುಗಳು ಕಾಣದಂತಾಗಿ, ಮುಗ್ಗರಿಸಿ ಬೀಳತೊಡಗಿದರು. ಮಠದ ಶಾಪ ತಟ್ಟಿದೆ ಎಂದು ಪಠಾಣರು ಮಠ ಖಾಲಿ ಮಾಡಿದರು ಎಂದು ಊರಿನ ಹಿರಿಯರು ದಾಖಲಿಸುತ್ತಾರೆ. ಅಳವಂಡಿ ಅಷ್ಟೇ ಅಲ್ಲದೇ ಕವಲೂರು, ಬನ್ನಿಕೊಪ್ಪ ಮತ್ತು ಮುಧೋಳ ರಜಾಕಾರರ ಮತ್ತು ಪಠಾಣರ ಕ್ಯಾಂಪ್ ಆಗಿತ್ತು.

**ಸಂತೆಗೆ ಹೋಗುವ ಮಹಿಳೆಯರ ಮೇಲೆ ದಾಳಿ : ಸೇಡು ತೀರಿಸಿಕೊಂಡ ಹೋರಾಟಗಾರರು :**

ಪ್ರತಿ ರವಿವಾರ ಮತ್ತು ಸೋಮವಾರ ಅಳವಂಡಿ ಮುಂಡರಗಿ ಮತ್ತು ಕವಲೂರು ಸಂತೆಗೆ ಹೆಣ್ಣುಮಕ್ಕಳು ಹೋಗಿಬರುವುದು ರೂಢಿಯಲ್ಲಿತ್ತು. ಪಠಾಣರು, ರಜಾಕಾರರು ಇದೇ ಅವಕಾಶವನ್ನು ಬಳಸಿಕೊಂಡು ಹೆಣ್ಣುಮಕ್ಕಳ ಗಂಟುಗಳನ್ನು ಕಸಿದುಕೊಂಡು, ಮಾನಭಂಗ ಮಾಡುವ ಪ್ರಕರಣಗಳು ಹೆಚ್ಚಾದವು. ಇದನ್ನು ಕೇಳಿ ಕೇಳಿ ರೋಸಿ ಹೋದ ಮುಂಡರಗಿ ಶಿಬಿರದ ಶಂಕ್ರಪ್ಪ ಯರಾಶಿ, ಪ್ರಭುರಾಜ ಪಾಟೀಲ, ಕರಿಸಿದ್ಧ ಸ್ವಾಮಿಗಳು ಗೆರಿಲ್ಲಾ ತಂತ್ರ ಬಳಸಿ ಸಿಕ್ಕ ಸಿಕ್ಕಲ್ಲಿ ಪಠಾಣರ ಮೇಲೆ ದಾಳಿ ಮಾಡಿ ಕೆಲವು ಪಠಾಣರನ್ನು ಕೊಂದು ಹಾಕಿದರು.

**ಕವಲೂರು ಶಸ್ತ್ರಾಸ್ತ್ರ ಲೂಟಿ :**

ನಿಜಾಮನು ಹೋರಾಟಗಾರರಿಗೆ ಮತ್ತು ಭೂಗತ ಚಟುವಟಿಕೆಗಳನ್ನು ನಡೆಸಿ ತಮ್ಮ ಮೇಲೆ ದಾಳಿ ಮಾಡುವರಿಗೆ ಶಸ್ತ್ರಾಸ್ತ್ರಗಳು ದೊರಕಬಾರದೆಂದು ಶಸ್ತ್ರಾಸ್ತ್ರಗಳನ್ನು ಹೊಂದಿದವರು ಸರಕಾರಕ್ಕೆ ಒಪ್ಪಿಸುವ ಆದೇಶ ಮಾಡಿ, ಅದರಂತೆ ಸಂಗ್ರಹಿಸಿದ ಶಸ್ತ್ರಾಸ್ತ್ರಗಳನ್ನು ಕವಲೂರು ಗೌಡರ ಮನೆಯಲ್ಲಿಟ್ಟರು. ಸುದ್ದಿ ತಿಳಿದ ಮುಂಡರಗಿಯ ಶಿಬಿರದ ಹೋರಾಟಗಾರರು ಕವಲೂರಿಗೆ ತಲುಪಿ ಮಧ್ಯರಾತ್ರಿ ಗೌಡರನ್ನ ಎಬ್ಬಿಸಿದರು. ಶಸ್ತ್ರಧಾರಿ ಹೋರಾಟಗಾರರನ್ನು ಕಂಡಕೂಡಲೇ ಗೌಡರು ತಮ್ಮ ಮನೆಯಲ್ಲಿ ಸಂಗ್ರಹಿಸಿದ್ದ ಎಲ್ಲ ಶಸ್ತ್ರಾಸ್ತ್ರಗಳನ್ನು ಹೋರಾಟಗಾರರ ಮುಖಂಡ ಶಂಕ್ರಪ್ಪನವರಿಗೆ ಒಪ್ಪಿಸಿದರು. ಗೌಡರ ಹತ್ತಿರ ಶಸ್ತ್ರಾಸ್ತ್ರಗಳನ್ನು ಪಡೆದು ಗೆಲುವಿನ ನಗೆ ಬೀರುತ್ತ ವಾಪಸ್ ಹೊರಟಿದ್ದ ಹೋರಾಟಗಾರರಿಗೆ ಪಠಾಣರ ವ್ಯಾನಿನ ಶಬ್ದ ಕೇಳಿತು. ಹಳ್ಳದ ಈಚಲಿನಲ್ಲಿ ಅಡಗಿ ಪಠಾಣರಿಂದ ತಪ್ಪಿಸಿಕೊಳ್ಳುವ ರೋಚಕ ಸನ್ನಿವೇಶ ಎಂಥವರನ್ನೂ ಉಸಿರು ಬಿಗಿ ಹಿಡಿಯುವಂತೆ ಮಾಡಿತು.

**ಅಳವಂಡಿ ಸಮೀಪದ ಗಡಿಭಾಗ 'ತಿಗರಿ'ಯ ಕರೋಡಗಿರಿ ನಾಕಾ ವಶ :**

ಇದಲ್ಲದೇ ಗಡಿ ಗ್ರಾಮ ತಿಗರಿಯಲ್ಲಿ ಕರೋಡಗಿರಿ ನಾಕಾವನ್ನು ಶಸ್ತ್ರಾಸ್ತ್ರ ಹೊಂದಿದ ಪಠಾಣರು ಕಾಯುತ್ತಿದ್ದರು. ಭಾರೀ ಪ್ರಮಾಣದ ಹಣ ಮತ್ತು ಮದ್ದು ಗುಂಡುಗಳ ವಶಕ್ಕಾಗಿ ಹೋರಾಟಗಾರರು ಯೋಜನೆ ಹಾಕಿದರು.



ಆದರೆ ಇದು ಸುಲಭದ ಮಾತಾಗಿರಲಿಲ್ಲ. ಶಸ್ತ್ರಾಸ್ತ್ರ ಬಳಸುವಲ್ಲಿ ಪರಿಣಿತಿ ಹೊಂದಿದವರು, ಸೈನಿಕ ತರಬೇತಿ ಹೊಂದಿದವರು ಮಾತ್ರ ಇಂತಹ ಕಠಿಣ ದಾಳಿಗಳನ್ನು ಮಾಡಬೇಕಾಗಿತ್ತು. ಸಮರ್ಥವಾಗಿ ಈ ಯೋಜನೆಯನ್ನು ನಿಭಾಯಿಸಿದ ಬನ್ನಿಕೊಪ್ಪದ ಶಂಕ್ರಪ್ಪ ಯರಾಶಿ, ಷಣ್ಮುಖಪ್ಪ ಯರಾಶಿ, ಶಂಕರಗೌಡ ತಗ್ಗಿನಮನಿ ಮತ್ತು ತಂಡ ರಾತ್ರಿ ಹೊತ್ತು ಕೈ ಬಾಂಬು ಸಿಡಿಸಿ ಪಠಾಣರನ್ನೆಲ್ಲ ಓಡಿಸಿ, ಹಣ ಮತ್ತು ಶಸ್ತ್ರಾಸ್ತ್ರ ಗಳನ್ನು ಲೂಟಿ ಮಾಡಿ ಕರೋಡಗಿರಿ ನಾಕಾಕ್ಕೆ ಬೆಂಕಿ ಇಟ್ಟರು. ಇದು ಹೋರಾಟಗಾರರ ಮನೋಬಲವನ್ನು ಇಮ್ಮಡಿಸಿತು.

**ಬರದೂರಿನ ಕುರಿಗಾಹಿಗಳ ಬರ್ಬರ ಹತ್ಯೆ : ಕೆರಳಿದ ಹೋರಾಟಗಾರರು**

ಮುಂಡರಗಿ ತಾಲ್ಲೂಕಿನ ಸಣ್ಣ ಊರು ಬರದೂರು ಅಳವಂಡಿಯ ಹತ್ತಿರದಲ್ಲಿದೆ. ಮುಗ್ಧ ಮೂವರು ಕುರಿಗಾಹಿಗಳು ತಮ್ಮ ಕುರಿಗಳನ್ನು ಮೇಯಿಸುತ್ತ ಮುಂಬೈ ಗಡಿ ದಾಟಿ ಕೇವಲ ಒಂದೆರಡು ಕಿಲೋಮೀಟರ್ ದೂರ ಮಾತ್ರ ನಿಜಾಮನ ಪ್ರಾಂತ್ಯದ ಒಳಗೆ ಬಂದಿದ್ದರು. ನಿಜಾಮನ ಪ್ರಾಂತ್ಯ ಯಾವುದು, ಮುಂಬಯಿ ಪ್ರಾಂತ್ಯ ಯಾವುದು ಎಂಬುದರ ಅರಿವು ಇಲ್ಲದ ಈ ಮುಗ್ಧ ಕುರಿಗಾಹಿಗಳನ್ನು ನಿಜಾಮನ ಪೋಲೀಸರು, ರಜಾಕಾರರು ಕುರಿಗಳ ಸಮೇತ ಹಿಡಿದುಕೊಂಡು ಬಂದು ಬೆಳಗಟ್ಟಿಗೆ ಕರೆದುತಂದರು. ಕೆಲವು ಕುರಿಗಳನ್ನು ಅಲ್ಲಿಯೇ ತಿಂದು, ಉಳಿದ ಕುರಿಗಳನ್ನು ಮಾರಾಟಕ್ಕೆ ಕೊಪ್ಪಳಕ್ಕೆ ಸಾಗಿಸಿದರು. ಎಷ್ಟೇ ಗೋಗರೆದರೂ, ಇನ್ನೊಮ್ಮೆ ಈ ಭಾಗದ ಹತ್ತಿರ ಬರುವುದಿಲ್ಲ ಎಂದು ನಡುಗುತ್ತ ಕೇಳಿಕೊಂಡರೂ ಬಿಡದ ನಿರ್ದಯಿ ರಜಾಕಾರರು ಮೂವರೂ ಕುರಿಗಾಹಿಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದರು. ಇದರಿಂದ ಕೆರಳಿದ ಹೋರಾಟಗಾರರು ಇದೇ ಬೆಳಗಟ್ಟಿಗೆ ಕುರಿಗಾಹಿಗಳ ಸಾವಿನ ವಿಚಾರಣೆಗೆ ಬಂದ ಅಧಿಕಾರಿ ಮತ್ತು ಪಠಾಣರ ಮೇಲೆ ಸೇಡು ತೀರಿಸಿಕೊಂಡರು.

ಇವುಗಳಲ್ಲದೇ ಕವಲೂರಿನಲ್ಲಿ ನಿಜಾಮನ ಪೊಲೀಸರು ೪ ಜನರನ್ನು ಹತ್ಯೆ ಮಾಡಿದ್ದು, ಘಟ್ಟಿರಡ್ಡಿಹಾಳಗೆ ಲೂಟಿ ಮಾಡಲು ಬಂದ ನಿಜಾಮನ ಪೋಲಿಸರನ್ನು ಸೋಮಪ್ಪ ಡಂಬಳ ನೇತೃತ್ವದ ಹೋರಾಟಗಾರರ ತಂಡ ಹಿಮ್ಮೆಟ್ಟಿಸಿದ್ದು ನೋಡ್ಕೊಂಡು ಅಳವಂಡಿ ಸಮೀಪದ ಬಿಸರಳ್ಳಿಯ ಲೂಟಿ, ಕಾತರಕಿಯಲ್ಲಿ ಹೆಣ್ಣುಮಕ್ಕಳ ಅಪಹರಣ, ಉಪ್ಪಿನ ಬೆಟಗೇರಿಯಲ್ಲಿ ರಜಾಕಾರರ

ಶರಣಾಗತಿ ಈ ಎಲ್ಲ ಘಟನೆಗಳು ಬಹುತೇಕ ಅಳವಂಡಿ ಭಾಗದ ಸುತ್ತ ಮುತ್ತಲೇ ನಡೆದದ್ದು.

**ಬೆಳಗಟ್ಟಿ ಪ್ರಕರಣ : ಕಂದಾಯ ಅಧಿಕಾರಿಯನ್ನು ವಾಪಸ್ ಕಳಿಸಿದ್ದು :**

ಮುಂಡರಗಿ ಶಿಬಿರದ ಹೋರಾಟಗಾರರಿಗೂ ಮತ್ತು ನಿಜಾಮ ಪೊಲೀಸರಿಗೂ 'ಬೆಳಗಟ್ಟಿ' ಗಣಿ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆಯಿತು. ಬೆಳಗಟ್ಟಿ ಗ್ರಾಮಕ್ಕೆ ಜಿಲ್ಲಾ ಕಂದಾಯ ಅಧಿಕಾರಿಯಾಗಿದ್ದ ಹುಸೇನ್ ಸಾಬ್ ಟೆಕ್ಕಿ ಬರುತ್ತಿದ್ದಾರೆಂಬ ಸುದ್ದಿ ಹರಡಿ ಅವರೊಡನೆ ಕಾದಾಡಲು ಶಂಕರಪ್ಪ ಯರಾಶಿ, ವೆಂಕಟಗಿರಿಯಪ್ಪ ನಾಗರಹಳ್ಳಿ, ಸೋಮಪ್ಪ ಡಂಬಳ, ಕಾಳಪ್ಪ ಸಣ್ಣಯರಾಶಿ, ಪ್ರಭುರಾಜ ಪಾಟೀಲ, ಪಂಚಪ್ಪ ಶೆಟ್ಟರು, ಗಿರಿಯಪ್ಪ ನಾಗರಹಳ್ಳಿ ಮೊದಲಾದ ಹೋರಾಟಗಾರರು ಮುಂಡರಗಿ ಮತ್ತು ಹಳ್ಳಿಕೇರಿ ಶಿಬಿರದಿಂದ ಹೊರಟು ನಿಜಾಮನ ಪೋಲೀಸರನ್ನು ಮತ್ತು ಕಂದಾಯ ಅಧಿಕಾರವನ್ನು ಬೆನ್ನಟ್ಟಿದರು. ಅವರು ಕುರಿಗಾಯಿ ಮತ್ತು ಒಬ್ಬ ರಜಾಕಾರರ ಕೊಲೆಗೆ ಸಂಭವಿಸಿದ ವಿಚಾರಣೆಗಾಗಿ ಅಲ್ಲಿ ಹೋಗುತ್ತಿದ್ದರು. ಬೆಳಗಟ್ಟಿಯ ಸ್ಮಶಾನದ ಭೂಮಿಯ ಗೋರಿಗಳ ಹಿಂದೆ ಹೋರಾಟಗಾರರು ಬಂದೂಕುಗಳನ್ನು ಹಿಡಿದು ಗಾಡಿಯತ್ತ ಗುಂಡಿನ ಮಳೆಗರೆದರು. ಗಾಬರಿಯಾದ ಅಧಿಕಾರಿ ತನ್ನೊಂದಿಗಿದ್ದ ೫೦ ಕ್ಕಿಂತಲೂ ಹೆಚ್ಚಿನ ರಜಾಕಾರ ಪೊಲೀಸರಿಗೆ ಪ್ರತಿರೋಧ ಒಡ್ಡಲು ಆದೇಶ ಮಾಡಿದನು. ಜೀವದ ಹಂಗು ತೊರೆದು ಹೋರಾಟಗಾರರು ಯುದ್ಧ ಮಾಡಿದರು. ಒಬ್ಬ ಯೋಧ ಶಂಕ್ರಪ್ಪಗೌಡ ತೆಗ್ಗಿನಮನೆ ಮರದ ಮೇಲೆ ಕುಳಿತು ಗುಂಡು ಹಾರಿಸುತ್ತಿದ್ದರೆಂಬ ಮಾಹಿತಿ ಇದೆ. ಗಿಡದ ಕೊಂಬೆಗೆ ಪೊಲೀಸರು ಹಾಕಿದ ಗುಂಡಿಗೆ ಆತ ಕೆಳಗೆ ಬಿದ್ದನು. ಧೈರ್ಯದಿಂದ ಕಡಿಮೆ ಸಂಖ್ಯೆಯಲ್ಲಿಯೂ ಹೋರಾಟಗಾರರು ಹೋರಾಡಿ ಸದರಿ ಅಧಿಕಾರಿಯನ್ನು ಮತ್ತು ನಿಜಾಮ ಪೋಲೀಸರನ್ನು ಹಿಂದಕ್ಕೆ ಅಟ್ಟಿದರು.

**ಕಾಡತೂಸುಗಳನ್ನು ತರುವಾಗ ಸಿಕ್ಕಿಬಿದ್ದ ಅಳವಂಡಿಯ ಹೋರಾಟಗಾರರು:**

ಅಳವಂಡಿಯ ಶಿವಮೂರ್ತಿಸ್ವಾಮಿ ಗಣ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಹಲವರಲ್ಲಿ ಸಿದ್ದಲಿಂಗಪ್ಪ ಅಡಿವೆಪ್ಪ ಶೆಟ್ಟರ್ ಅವರೂ ಒಬ್ಬರು. ಹೋರಾಟಕ್ಕಾಗಿಯೇ ಸೈನಿಕ ತರಬೇತಿ ಪಡೆದವರು ವೈದ್ಯರಾಗಿದ್ದ ಈ ನೆಲದ ಸ್ವಾತಂತ್ರ್ಯಕ್ಕಾಗಿ ಸೈನಿಕರಾದರು. ಇವರು ತಂಬ್ರಳ್ಳಿ ಶಿಬಿರದಲ್ಲಿ ಕೆಲಸ ಮಾಡುತ್ತಿರುವಾಗ ಬಳ್ಳಾರಿಯಿಂದ ಕಾಡತೂಸು ತರುವಾಗ ಪೋಲೀಸರ ಕೈಯಲ್ಲಿ ಸಿಕ್ಕಿ ಬಿಟ್ಟರು. ಈ ಸುದ್ದಿಯನ್ನು ತಿಳಿದ ಬಾಚಿಗೊಂಡನಹಳ್ಳಿ ಚನ್ನಬಸವನಗೌಡರು ಮತ್ತು ಕೊಪ್ಪಳದ ಸೋಮಪ್ಪ ಡಂಬಳ ಅವರು ಸಿದ್ಧಲಿಂಗಪ್ಪನವರನ್ನು ಬಿಡಿಸಿಕೊಂಡು ಬರುವಲ್ಲಿ ಯಶಸ್ವಿಯಾದರು



**ಬಿಸರಳ್ಳಿ ಗರಸಿನ ಸಾಧು ಮತ್ತು ಅಳವಂಡಿಯ ಶಿವಮೂರ್ತಿ ಸ್ವಾಮಿಗಳ ಸಂಬಂಧ :**

ಅಳವಂಡಿಯ ಶಿವಮೂರ್ತಿ ಸ್ವಾಮಿಗಳು ಬಿಸರಳ್ಳಿ ಗ್ರಾಮದ ರಾಮಕೃಷ್ಣ ಬುವಾ ಎನ್ನುವ ಸನ್ಯಾಸಿಯ ಶಿಷ್ಯರಾಗಿದ್ದರು. ಇವರಿಗೆ ಬಿಸರಳ್ಳಿಯ ಗರಸಿನ ಸಾಧು ಎಂಬ ಹೆಸರಿತ್ತು. ಬಿಸರಳ್ಳಿ, ಅಳವಂಡಿ, ಬೆಟಗೇರಿ, ಕವಲೂರು ಮತ್ತು ಸುತ್ತಮುತ್ತಲ ಜನತೆ ರಜಾಕಾರರ ಹಾವಳಿಯಿಂದ ತತ್ತರಿಸುತ್ತಿದ್ದಾಗ ಈ ಸಾಧು ಊರ ಜನರನ್ನು ಕಟ್ಟಿಕೊಂಡು ರಜಾಕಾರರ ವಿರುದ್ಧ ಹೋರಾಡಿದರು. ವಿಮೋಚನಾ ಹೋರಾಟವು ಯಶಸ್ವಿಯಾಗಿ ಹೈದರಾಬಾದ್ ಪ್ರಾಂತ್ಯ ಭಾರತದ ಒಕ್ಕೂಟಕ್ಕೆ ಸೇರಿದ ನಂತರ ಶಿವಮೂರ್ತಿಸ್ವಾಮಿಗಳನ್ನು ಬಿಸರಳ್ಳಿಯ ತಮ್ಮ ಆಶ್ರಮಕ್ಕೆ ಕರೆಸಿ ಸನ್ಮಾನ ಮಾಡಿದರು.

ಅಳವಂಡಿ ಸಮೀಪದ ಉಪ್ಪಿನಬೆಟಗೇರಿ ಗ್ರಾಮದ ಪಾತರದ ಶ್ಯಾಮವ್ವ ಮತ್ತು ಅವರ ಮಗಳು ಲಕ್ಷ್ಮವ್ವ ಜೋಗಮ್ಮರು ವೇಷವನ್ನು ಹಾಕಿಕೊಂಡು ಅಳವಂಡಿ, ಬೆಟಗೇರಿ, ಕವಲೂರು ಮುಂತಾದ ಗ್ರಾಮಗಳಲ್ಲಿ ರಜಾಕಾರರ ಚಟುವಟಿಕೆಗಳ ಮಾಹಿತಿಗಳನ್ನು ಅಳವಂಡಿಯ ಮೂಲಕ ಮುಂಡರಗಿಯ ಶಿಬಿರಕ್ಕೆ ಮುಟ್ಟಿಸುತ್ತಿದ್ದರು. ಇವರೀರ್ವರ ಮಾಹಿತಿಯ ಕಾರಣದಿಂದಾಗಿಯೇ ಅಳವಂಡಿ, ಬೆಟಗೇರಿ ಮತ್ತು ಬೆಳಗಟ್ಟಿಗಳಲ್ಲಿದ್ದ ರಜಾಕಾರರು ಮುಂಡರಗಿ ಶಿಬಿರದ ಹೋರಾಟಗಾರರ ಗುಂಡಿಗೆ ಬಲಿಯಾಗಿದ್ದರು. ತಮ್ಮ ಮಾಹಿತಿಯು ಹೋರಾಟಗಾರರಿಗೆ ಇವರೀರ್ವರ ಮೂಲಕ ತಿಳಿಯುತ್ತಿದೆ ಎಂಬುದು ಗೊತ್ತಾದ ಮೇಲೆ ಇಬ್ಬರು ಹೆಣ್ಣುಮಕ್ಕಳನ್ನು ಪಠಾಣರು ಚಿತ್ರಹಿಂಸೆ ನೀಡಿ ಕೊಂದರು. ಇದು ಅಳವಂಡಿ, ಮುಂಡರಗಿ ಭಾಗದ ಹೋರಾಟಗಾರರನ್ನು ಮತ್ತಷ್ಟು ಕೆರಳಿಸಿತು.

**ಆಪರೇಷನ್ ಪೋಲೋ :**

ಕೊನೆಗೂ ಈ ಭಾಗದ ಹೋರಾಟಗಾರರ ಕೂಗು, ಜನತೆಯ ಆರ್ತನಾದ ದೆಹಲಿಗೆ ತೀವ್ರತರವಾಗಿ ತಲುಪಿತು. ಕೆಲವು ಅಡೆತಡೆಗಳನ್ನು ಮೀರಿಯೂ ಸರ್ದಾರ್ ವಲ್ಲಭಬಾಯಿ ಪಟೇಲರು ದಿಟ್ಟ ನಿಲುವನ್ನು ಕೈಗೊಂಡು ಸೆಪ್ಟೆಂಬರ್ ೧೩ ಪೊಲೀಸ್ ಕಾರ್ಯಾಚರಣೆಗೆ ಸೂಚಿಸಿದರು. ಹೈದ್ರಾಬಾದ್ ಪ್ರಾಂತ್ಯದ ಎಲ್ಲ ದಿಕ್ಕುಗಳಿಂದಲೂ ಭಾರತದ ಸೈನಿಕರು ನಿಜಾಮನ ಸೈನ್ಯದ ವಿರುದ್ಧ ಹೋರಾಟಕ್ಕಿಳಿದರು. ಇದಕ್ಕೆ 'ಆಪರೇಷನ್ ಪೋಲೋ' ಎಂದು ಕರೆಯಲಾಯಿತು. ಲೆಫ್ಟಿನೆಂಟ್ ಜನರಲ್ ಮಹಾರಾಜ್ ಸಿಂಗ್ ರ ನೇತೃತ್ವದಲ್ಲಿ ಜನರಲ್ ಚೌದರಿ, ಮೇಜರ್ ಜನರಲ್ ಡಿ.ಎಸ್. ಬ್ರಾರ್ ಮುಂಬೈ ಕಡೆಯಿಂದ, ಎ.ಎ. ರುದ್ರ, ಬ್ರಿಗೇಡಿಯರ್ ಶೋಯೆ ದತ್ತ ಸಿಂಗ್ ಅವರು ಮಧ್ಯ ಪ್ರಾಂತ ಹಾಗೂ ಬರಾರ್ ಪ್ರಾಂತ್ಯದಿಂದ, ಮೇಜರ್ ಜನರಲ್ ಜಯಂತನಾಥ ಚೌಧರಿ ಸೊಲ್ಲಾಪುರದಿಂದ ಮುತ್ತಿಗೆ ಹಾಕಿದರು.

ನಳದುರ್ಗ, ರಾಯಚೂರಿನ ಕೆಲವು ಕಡೆ ಮತ್ತು ಕೊಪ್ಪಳದ ತುಂಗಭದ್ರಾ ನದಿಯ ಹತ್ತಿರ ಮಾತ್ರ ನಿಜಾಮನ ಸೈನ್ಯ ಪ್ರತಿರೋಧ ತೋರಿತು. ಉಳಿದಂತೆ ದೇಶಭಕ್ತ ಜನತೆಯ ಸಹಾಯದಿಂದ ಸೈನ್ಯವೂ ಮುನ್ನುಗ್ಗಿತು. ಹೆದರಿದ ನಿಜಾಮನ ಸೈನ್ಯ ಬಾಲ ಮುದುರಿಕೊಂಡಿತು. ಕೊನೆಗೂ ಹೈದರಾಬಾದಿನ ನಿಜಾಮ ಸೆಪ್ಟೆಂಬರ್ ೧೮, ೧೯೪೮ ರಂದು ಸರ್ದಾರ್ ಪಟೇಲರಿಗೆ ಶರಣಾದ.

ಹೈದರಾಬಾದ್ ಪ್ರಾಂತ್ಯ ಕೊನೆಗೂ ಸ್ವಾತಂತ್ರ್ಯವನ್ನ ಹೊಂದಿತು. ಇತ್ತ ಸಂಭ್ರಮದ ಆಚರಣೆಯ ಘೋಷಣೆಗಳು ಮುಗಿಲು ಮುಟ್ಟಿದವು. ಅಳವಂಡಿ ದೇಶಭಕ್ತರ ನೆಲವೆಂದು ಸಾಬೀತುಪಡಿಸಿತು. ಸ್ವಾತಂತ್ರ್ಯಾನಂತರ ಕಾಂಗ್ರೆಸ್ಸನ್ನು ವಿಸರ್ಜನೆ ಗೊಳಿಸಬೇಕು ಎಂಬ ಮಾತನ್ನು ಶಿವಮೂರ್ತಿಸ್ವಾಮಿ ಅಳವಂಡಿ ಅವರು ಬೆಂಬಲಿಸಿದ್ದರು ಆ ಕಾರಣಕ್ಕಾಗಿಯೇ ಸ್ವಾತಂತ್ರ್ಯಾನಂತರ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕೊಪ್ಪಳದಿಂದ ಸಂಸತ್ತಿನ ಸದಸ್ಯರಾಗಿ ಆಯ್ಕೆಯಾದರು.

ಅಳವಂಡಿ ಈಗಲೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವರನ್ನು ನಾಡಿಗೆ ಕೊಟ್ಟಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಇಲ್ಲಿನ ಕೊಡುಗೆ ಅನನ್ಯವಾದುದು.



**ಕೊಪ್ಪಳ ಭಾಗದ ಸ್ವಾತಂತ್ರ್ಯ ಹೋರಾಟಗಾರರು :**

ಲಕ್ಷ್ಮಣಾಚಾರ್ಯ ಅಗ್ನಿಹೋತ್ರಿ, ಜನಾರ್ದನರಾವ್ ದೇಸಾಯಿ ವಕೀಲರು, ನರಸಿಂಗರಾವ್ ಹಂಪಿಕರ್, ರಾಘವೇಂದ್ರರಾವ್ ಚಾಕಲಬ್ಬಿ ವಕೀಲರು, ಕೀರ್ತನಕೇಸರಿ ಜಯರಾಮಾಚಾರ್ಯ, ಬಸವಂತರಾವ್ ಕಾಟ್ರಳ್ಳಿ, ರಾಮಕೃಷ್ಣ ಬೋಂದಾಡೆ, ಶರಣಬಸವರಾಜ ಬಿಸರಳ್ಳಿ, ಡಾ. ಗಂಗಾಧರ ಸ್ವಾಮಿ ಹಿರೇಮಠ, ಎಂ. ವಿರೂಪಾಕ್ಷಪ್ಪ ನಾಗಪ್ಪ ಅಬ್ಬಿಗೇರಿ, ಪ್ರಹ್ಲಾದ್ ರಾವ್ ದೇಸಾಯಿ ದ್ಯಾಂಪುರ, ವಿ. ಎಚ್. ದೇಸಾಯಿ, ಕೊಟ್ರಬಸವ, ಡಿ.ಆರ್. ವಿಠ್ಠಲರಾವ್, ಎಸ್. ಎಂ. ಬಂಗಾರಶೆಟ್ಟರ್, ಶ್ರೀನಿವಾಸರಾವ್ ನಿಟ್ವಾಲಿ, ಶಿವಪ್ಪ ಹೆಬ್ಬಾಳ ಕವಲೂರು, ಬಸವರೆಡ್ಡಿ ಆರ್. ಅಬ್ಬಿಗೇರಿ, ಆರ್. ಬಿ. ಗುಡಿ, ವಿರೂಪಾಕ್ಷಪ್ಪ ಕಳ್ಳಿ, ಹುಸೇನ್ ಸಾಬ್ ಬಿಸರಳ್ಳಿ, ನಬಿಸಾಹೇಬ ಬಾವಾಜಿ ಹೆಸರೂರು, ಹನುಮನಗೌಡ ಪೊಲೀಸ್ ಪಾಟೀಲ್, ಚನ್ನಬಸವನಗೌಡ ಅಲ್ಲೀಪುರ, ಸುಮಂತರಾವ್ ಪಟವಾರಿ, ಯಲ್ಲಪ್ಪ ಮಾದಿನೂರು ಸಿಂದೋಗಿ, ಬಂಡಾಚಾರ್ಯ ಪುರೋಹಿತ ಕಿನ್ನಾಳ ಮತ್ತು ಇನ್ನೂ ಹಲವರು.

**ಅಳವಂಡಿಯ ಸ್ವಾತಂತ್ರ್ಯ ಹೋರಾಟಗಾರರು**

ಶಿವಮೂರ್ತಿಸ್ವಾಮಿ ಅಳವಂಡಿ, ಸಿದ್ಧಲಿಂಗಪ್ಪ ಅಡಿವೆಪ್ಪ ಶೆಟ್ಟರ್ ಅಳವಂಡಿ, ಪಂಚಪ್ಪ ಶೆಟ್ಟರು ಅಳವಂಡಿ, ಕರಿಸಿದ್ಧಸ್ವಾಮಿ ಇನಾಮದಾರರು ಅಳವಂಡಿ, ಬೆಟಗೇರಿಯ ಬಿ ವಿರೂಪಾಕ್ಷಪ್ಪ.

**ಮಾಹಿತಿಯ ಕೊರತೆ ಇರುವ ಅಳವಂಡಿಯ ಸ್ವಾತಂತ್ರ್ಯ ಹೋರಾಟಗಾರರು**

ಜೀವಪ್ಪ ತಂದೆ ವೆಂಕಪ್ಪ ಟಿಕಾರಿ , ಶಿವಲಿಂಗಪ್ಪ ಗಿಡ್ಡಪ್ಪ ಸಾಲಿಮನಿ, ಮಲ್ಲಪ್ಪ ತಂದೆ ಪುಂಡಪ್ಪ ಮುರಡಿ, ರಾಮರೆಡ್ಡೆಪ್ಪ ಹನುಮರಡ್ಡೆಪ್ಪ ಕಲ್ಗುಡಿ, ನರಸವ್ವ ಗಂಡ ಯಂಕಪ್ಪ ತಿಗರಿ, ಮುದುಕಪ್ಪ ತಂದೆ ವೆಂಕೋಬಪ್ಪ ಟಿಕಾರಿ, ವೆಂಕೋಬಾಚಾರ್ಯ, ಹನುಮಂತಾಚಾರಿ ಜೋಶಿ, ಮುದುಕಪ್ಪ ತಂದೆ ವೆಂಕೋಬಪ್ಪ ಟಿಕಾರಿ, ಶಿವಪ್ಪ ತಂದೆ ವೀರಪ್ಪ ದ್ಯಾಂಪುರ, ಫಕೀರ ರೆಡ್ಡೆಪ್ಪ ಭೀಮರಡ್ಡೆಪ್ಪ ಮತ್ತು ಇನ್ನೂ ಮೊದಲಾದವರು.

❖

## ಆಕರ ಗ್ರಂಥಗಳು


೧. ಕೊಪ್ಪಳ ನಾಡಿನ ಸ್ವಾತಂತ್ರ್ಯ ಹೋರಾಟ – ರಾಮಣ್ಣ ಹವಳೆ, ರಾಯಚೂರು, ಪ್ರಕಾಶನ : ಶ್ರೀ ಭೀಮಜ್ಜ ಮುರಡಿ ಪ್ರತಿಷ್ಠಾನದಿಂದ ಪ್ರಕಾಶನ

೨. ವಿಮೋಚನೆ : ಸಂಪಾದಕರು – ಎಚ್.ಎಸ್. ಪಾಟೀಲ, ಕೊಪ್ಪಳ ಪ್ರಕಾಶನ : ಜಿಲ್ಲಾಡಳಿತ ಕೊಪ್ಪಳ

೩. ತಿರುಳ್ಗನ್ನಡ ೬೨ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ – ಸ್ಮರಣ ಸಂಚಿಕೆ

೪. ಕೊಪಣ ಸಿರಿ – ಕೊಪ್ಪಳ ಜಿಲ್ಲಾ ಅಧ್ಯಯನ ೭೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗವತಿ – ಸ್ಮರಣ ಸಂಚಿಕೆ

೫. ಕೊಪ್ಪಳ ಸಾಂಸ್ಕೃತಿಕ ಪರಂಪರೆ – ಒಂದು ಅಧ್ಯಯನ – ಎಚ್.ಎಸ್. ಪಾಟೀಲ

೬. ಕೊಪ್ಪಳ ಜಿಲ್ಲೆಯ ಅಂಕಿ ಸಂಖ್ಯೆಯ ನೋಟ–೨೦೧೮–೧೯

೭. ರಜಾಕಾರರ ಲಾವಣಿ– ಪ್ರಕಾಶಕರು ಪ್ರಸಾರಾಂಗ ಕನ್ನಡ ಹಂಪಿ ವಿಶ್ವವಿದ್ಯಾಲಯ ಹಂಪಿ.

೮. ಕರ್ನಾಟಕದ ಹುಲಿ – ಸಂ. ಹನುಮಂತಪ್ಪ ಅಂಡಗಿ, ಎ.ಟಿ. ಕಲ್ಮಠ.


❖ ❖ ❖

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |